ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 39
೨೭ ಜುಲೈ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

ಅರಬ್ ರಾಷ್ಟ್ರೀಯತೆಯನ್ನು ಇನ್ನು ತುಳಿಯದಿರಿ !

— ಮಧ್ಯಪೂರ್ವದಿಂದ ಸಾಮ್ರಾಜ್ಯಶಾಹಿಗಳು ತೊಲಗದಿದ್ದರೆ ಪ್ರಪಂಚಕ್ಕೆ ಶಾಂತಿ ಇಲ್ಲ —

ಇರಾಕ್ ಪ್ರಜಾರಾಜ್ಯ ಉದಯವಾದ ಮರುಕ್ಷಣದಲ್ಲೇ ಲೆಬನಾನ್ ಮತ್ತು ಜೋರ್ಡಾನ್ ಮೇಲೆ ಅಮೇರಿಕದ ಮತ್ತು ಬ್ರಿಟನಿನ ಸೇನೆಗಳು ಆಕ್ರಮಣ ನಡೆಸಿವೆ. ಈ ನಗ್ನ ಆಕ್ರಮಣವು ಲೋಕವನ್ನೇ ಇನ್ನೊಂದು ಯುದ್ಧದ ಅಪಾಯಕ್ಕೆ ಗುರಿಮಾಡಿದೆ.

ಸಾಮ್ರಾಜ್ಯಶಾಹಿಗಳ ಈ ಸಾಹಸವು ಆಕ್ರಮಣವಲ್ಲವೆಂದೂ ಸಂಯುಕ್ತ ರಾಷ್ಟ್ರ ಸಂಸ್ಥೆಯ ಶಾಸನಕ್ಕೆ ವಿರೋಧವಲ್ಲದೆಂದೂ ಅಮೇರಿಕದ ಅಧ್ಯಕ್ಷ ಐಸನ್ ಹೋವರ್ ಹೇಳಿರುವುದು ಹುಣ್ಣಿನಮೇಲೆ ಬರೆ ಎಳೆಯುವ ನೀಚ ನೀತಿಯಲ್ಲದೆ ಮತ್ತೇನೂ ಅಲ್ಲ. ಲೆಬನಾನಿನ ಮತ್ತು ಜೋರ್ಡಾನಿನ ಜನರಿಗೆ ಸಾಮ್ರಾಜ್ಯಶಾಹಿಗಳ ಕೈಗೊಂಬೆಗಳಾದ ದ್ರೋಹಿಗಳ ಆಳ್ವಿಕೆ ಬೇಡವಾಗಿದೆ; ಅದನ್ನು ಕಿತ್ತು ಹಾಕಲು ಅವರು ಹೋರಾಡುತ್ತಿದ್ದಾರೆ. ಅದು ಆ ದೇಶಗಳ ಆಂತರಿಕ ವಿಷಯ. ಅದರಲ್ಲಿ ಸೈನ್ಯ ಬಲವನ್ನು ಪ್ರಯೋಗಿಸುವ ಅಧಿಕಾರ ಯಾರಿಗೂ ಇಲ್ಲ. ಮಧ್ಯ ಪೂರ್ವ ಪ್ರದೇಶದಲ್ಲಿ ಅರಬ್ ಜನತೆ ಎಚ್ಚೆತ್ತು ಸ್ವಾತಂತ್ರ್ಯಕ್ಕೋಸ್ಕರ ಹೋರಾಡುತ್ತಿದೆ. ಜಯದಿಂದ ಜಯಕ್ಕೆ ಮುನ್ನಡೆಯುತ್ತಿದೆ. ಸಾಮ್ರಾಜ್ಯಶಾಹಿಗಳು ಇದುವರೆಗೆ ಸೂರೆಮಾಡುತ್ತಿದ್ದ ಎಣ್ಣೆಯ ಗನಿಗಳು ಅವರ ಕೈತಪ್ಪಿಹೋಗುವ ಕಾಲಬಂದಿದೆ. ಅರಬ್ ಜನರೊಳಗೆ ಒಡಕು ಹುಟ್ಟಿಸಿ, ಪರಸ್ಪರ ಬಡಿದಾಡಿಸಿ, ಲಾಭ ಪಡೆಯುವುದಕ್ಕೆ ಸಾಮ್ರಾಜ್ಯಶಾಹಿಗಳಿಗೆ ಇನ್ನು ಸಾಧ್ಯವಿಲ್ಲದಂತಾಗಿದೆ. ಸೋವಿಯತ್ ಯೂನಿಯನಿನ ಮಗ್ಗುಲಲ್ಲಿ, ಆಸ್ಯ–ಆಫ್ರಿಕಾ ಖಂಡಗಳ ಮಧ್ಯದಲ್ಲಿ, ತಳವೂರಿ ಯುದ್ಧಕ್ಕೆ ಸನ್ನಾಹ ಮಾಡುವ ಮತ್ತು ಘರ್ಷಣೆಗಳನ್ನು ಪ್ರಚೋದಿಸುವ ಸಾಮ್ರಾಜ್ಯಶಾಹಿಗಳ ಬಗಲು ಬಚ್ಚರ ಬಾಗ್ದಾದ್ ಕೂಟ ಕುಸಿದು ಬಿದ್ದಿದೆ. ಇದರಿಂದ ರೊಚ್ಚಿಗೆದ್ದ ಅಮೇರಿಕ ಮತ್ತು ಬ್ರಿಟನಿನ ಸಾಮ್ರಾಜ್ಯಶಾಹಿಗಳು ಪ್ರಸ್ತುತ ಆಕ್ರಮಣವನ್ನು ನಡೆಸಿದ್ದೆಂದು ಸ್ಪಷ್ಟವಿದೆ.

ಮಧ್ಯ ಪೂರ್ವ ದೇಶಗಳಿಂದ ಅಮೇರಿಕದ ಮತ್ತು ಬ್ರಿಟನಿನ ಸೈನ್ಯಗಳು ವಾಪಾಸಾಗಬೇಕೆಂದು ಲೋಕದ ಜನತೆ ಒಕ್ಕೊರಲಿನಿಂದ ಕೇಳುತ್ತಿದೆ. ಅಮೇರಿಕದಲ್ಲೂ ಬ್ರಿಟನಿನಲ್ಲೂ ಕೂಡ ಈ ಕೇಳಿಗೆ ಜೋರಾಗುತ್ತಿದೆ. ಮುರಿದು ಬಿದ್ದಿರುವ ಬಾಗ್ದಾದ್ ಕೂಟವನ್ನೇ ನಂಬಿಕೊಂಡಿ

ಪಂಚಮಹಾಶಕ್ತಿಗಳ ಶೃಂಗ ಸಭೆ ನಡೆಯಬೇಕು

ರುವ ಇರಾನ್, ತುರ್ಕಿ ಮತ್ತು ಪಾಕೀಸ್ಥಾನದ ಆಳುವವರು ಮಾತ್ರ ಸಾಮ್ರಾಜ್ಯಶಾಹಿಗಳನ್ನು ಬರಮಾಡಿಕೊಂಡಿದ್ದಾರೆ. ಆದರೆ ಆ ದೇಶಗಳ ಜನರಾದರೂ ಈ ಆಕ್ರಮಣವನ್ನು ಖಂಡಿಸದೆ ಬಿಟ್ಟಿಲ್ಲ. ಲೆಬನಾನಿನ ಮುಖ್ಯ ಸೇನಾಧಿಪತಿ ಮತ್ತು ರಾಷ್ಟ್ರ ಶಾಸನ ಸಭಾಧ್ಯಕ್ಷರು ಈ ಆಕ್ರಮಣಗಾರ ಸೇನೆಗಳು ವಾಪಾಸಾಗಬೇಕೆಂದು ಕೇಳಿದ್ದಾರೆ. ಸಾಮ್ರಾಜ್ಯಶಾಹಿಗಳು ಈ ಕೇಳಿಕೆಗೆ ಕಿವಿಗೊಡದಿದ್ದರೆ, ತಮ್ಮ ಸೇನೆಗಳನ್ನು ಕೂಡಲೆ ಹಿಂದಕ್ಕೆ ಕರೆಸಿಕೊಳ್ಳದಿದ್ದರೆ, ಅವರೂ ಅವರನ್ನು ನಂಬಿಕೊಂಡಿರುವ ದ್ರೋಹಿಗಳೂ ಇನ್ನೊಂದು ದುರಂತದ ಪಾಠ ಕಲಿಯುವುದರಲ್ಲಿ ಸಂಶಯವಿಲ್ಲ.

ಲೆಬನಾನಿನ ಮೇಲೆ ಮತ್ತು ಜೋರ್ಡಾನಿನ ಮೇಲೆ ಈ ಆಕ್ರಮಣ ನಡೆದಾಗ, ಯುಕ್ತ ರಾಷ್ಟ್ರ ಸಂಸ್ಥೆಯ ಭದ್ರತಾ ಮಂಡಲದ ಸಭೆಯಲ್ಲಿ ಲೆಬನಾನಿನ ಪ್ರಶ್ನೆ ಚರ್ಚಿಸಲ್ಪಡುತ್ತಿತ್ತು. ಲೆಬನಾನಿನೊಳಗೆ ಪ್ರವೇಶಿಸುವುದಕ್ಕೆ ಒಂದು ನೆಪವಾಗಿ, ಅಲ್ಲಿ ಸಂಯುಕ್ತ ಅರಬ್ ಪ್ರಜಾರಾಜ್ಯ ಒಳನುಸುಳಿ ಗಲಭೆಯೆಬ್ಬಿಸಿದೆಯೆಂದು ಅಮೇರಿಕೆ ಸಂಯುಕ್ತ ರಾಷ್ಟ್ರ ಸಂಸ್ಥೆಗೆ ದೂರು ಕೊಟ್ಟಿತ್ತು. ಆದರೆ ಸಂ. ರಾ. ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ನೇತೃತ್ವದಲ್ಲಿ ಲೆಬನಾನಿನ ಪರಿಸ್ಥಿತಿಯನ್ನು ಪರಿಶೀಲಿಸಲು ಹೋಗಿದ್ದ ಸಮಿತಿಯು, ಅಂಥ ಒಳನುಸುಳಾಟವೇನೂ ನಡೆದಿಲ್ಲವೆಂದು ಬಹಿರಂಗವಾಗಿ ಸಾರಿದೆ. ನೆಪವಿಲ್ಲದಿದ್ದರೂ ಚಿಂತಿಲ್ಲವೆಂದು ಅಮೇರಿಕ, ಮತ್ತದನ್ನು ಹಿಂಬಾಲಿಸಿ, ಬ್ರಿಟನ್ ಆಕ್ರಮಣ ನಡೆಸಿಯೇ ಬಿಟ್ಟಿವೆ.

ಇದು ಮಧ್ಯಪೂರ್ವ ಪ್ರದೇಶದಲ್ಲಿ ಮಾತ್ರವಲ್ಲ, ನೆರೆಹೊರೆಯ ರಾಷ್ಟ್ರಗಳ, ಆಸ್ಯಾ—ಆಫ್ರಿಕಾ ಖಂಡದ—ಇಡೀ ಲೋಕದ ಜನತೆಗಳ ಸ್ವಾತಂತ್ರ್ಯಕ್ಕೂ, ಭದ್ರತೆಗೂ ಶಾಂತಿಗೂ ಇದುವರೆಗೆ ಸಂಭವಿಸಿರದಷ್ಟು ಘೋರವಾದ ವಿಪತ್ತನ್ನು ತಂದಿಟ್ಟಿದೆ. ಇದನ್ನು ನಡೆಯಗೊಡಲು ಸಾಧ್ಯವಿಲ್ಲ.

ಸೋವಿಯತ್ ಪ್ರಧಾನಿ ನಿಕಿತಾ ಕ್ರುಶ್ಚೇವ್‌ರವರು ನೆಹರೂರವರಿಗೆ ಬರೆದಿರುವ ತುರ್ತಿನ ಪತ್ರದಲ್ಲಿ ಹೀಗೆ ಹೇಳಿದ್ದಾರೆ: "ಲೆಬನಾನಿನಲ್ಲಿ ಅಮೇರಿಕದ ಮತ್ತು ಜೋರ್ಡಾನಿನಲ್ಲಿ ಬ್ರಿಟನಿನ ಆಕ್ರಮಣದ ಫಲವಾಗಿ ನಾವಿಂದು ಮಾನವ ಕುಲದ ಚರಿತ್ರೆಯಲ್ಲೇ ಅತ್ಯಂತ ಗಂಭೀರವಾದ ಪರಿಸ್ಥಿತಿಯಲ್ಲಿದ್ದೇವೆ; ಯಾವುದೇ ಒಂದು ತಪ್ಪು ಹೆಜ್ಜೆಯನ್ನು ಇಟ್ಟರೆ ಲೋಕದಲ್ಲೊಂದು ಗಂಡಾಂತರವೇ ಉಂಟಾಗುವ ಸ್ಥಿತಿಯಲ್ಲಿಗೆ ನಾವು ತಲುಪಿದ್ದೇವೆ........ ಯಾವುದಾದರೂ ಪ್ರಾದೇಶಿಕ ಯುದ್ಧವೊಂದು ಲೋಕ ಯುದ್ಧವಾಗಿ ಹರಡಬಹುದೆಂದು ಚರಿತ್ರೆ ಹೇಳುತ್ತದೆ.... ಈ ಆಕ್ರಮಣವು ವಸಾಹತುಗಾರರ ಹಳೆಯ ನೀತಿಯ ಮುಂದುವರಿಯುವಿಕೆಯಾಗಿದೆ; ನಿಮ್ಮ ದೇಶವೂ ಹಿಂದೆ ಅದಕ್ಕೆ ಬಲಿಯಾಗಿತ್ತು.... ಯುದ್ಧ ಆಗಬೇಕೇ ಆಗಬಾರದೇ ಎಂದು ನಿರ್ಣಯವಾಗುತ್ತಿರುವ ಈ ಘಟ್ಟದಲ್ಲಿ, ರಷ್ಯಾ, ಅಮೇರಿಕ, ಬ್ರಿಟನ್, ಫ್ರಾನ್ಸ್ ಮತ್ತು ಭಾರತ ಸರಕಾರಗಳ ಉಚ್ಚ ನಾಯಕರು ಸಂಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿಗಳ ಸಮೇತವಾಗಿ ಒಂದು ಕಡೆ ಕಲೆತು, ಈಗ ಆರಂಭವಾಗಿರುವ ಸೈನಿಕ ಘರ್ಷಣೆಯನ್ನು ಕೊನೆಗಾಣಿಸಲು ದಾರಿ ಹುಡುಕಬೇಕು. ಅದನ್ನು ಮತ್ತೆ ಭದ್ರತಾ ಮಂಡಲದಲ್ಲಿ ಅಂಗೀಕರಿಸಿ, ಜಾರಿಗೊಳಿಸಬೇಕು"

ಪ್ರಧಾನಿ ನೆಹರೂರವರು ಈ ಸೂಚನೆಯನ್ನು ಸ್ವಾಗತಿಸಿ, ಅಂಥ ಶೃಂಗ ಸಮ್ಮೇಳನದಲ್ಲಿ ಭಾಗವಹಿಸಲು ತಾವು ಸಿದ್ಧರಿರುವುದಾಗಿ ತಿಳಿಸಿದ್ದಾರೆ.

(ಕೊನೇ ಪುಟ ನೋಡಿ)

ಲೆಬನಾನ್ ಜನತೆಗೆ ಷಾಮೂನ್ ಆಳ್ವಿಕೆಯೂ ಬೇಡ ಅಮೇರಿಕಾ ಸೇನೆಯ ರಕ್ಷಣೆಯೂ ಬೇಡ !

× ಲೆಬನಾನ್ ಪರಿಸ್ಥಿತಿ ಬಗ್ಗೆ ಪ್ರತ್ಯಕ್ಷದರ್ಶಿಯ ಹೇಳಿಕೆ ×

"ಅಮೇರಿಕೆಯ ಸೈನಿಕರು ಲೆಬನಾನ್‌ನಲ್ಲಿ ನೆಲೆಯೂರುತ್ತಿದ್ದುದನ್ನು ಲೆಬನಾನ್ ಜನತೆ ತೀವ್ರವಾಗಿ ಪ್ರತಿಭಟಿಸಿತು. ಅನೇಕ ನಗರಗಳಲ್ಲಿ ವಿರೋಧ ಪ್ರದರ್ಶನಗಳೂ ನಡೆದುವು. ಕೂವೈಡ್‌ನಲ್ಲಂತೂ ಇಡೀ ನಗರದ ಜನತೆಯೆ ಹೊರಬಂದು ಅಮೆರಿಕೆಯ ಮಿಲಿಟರಿ ಹಸ್ತಕ್ಷೇಪವನ್ನು ತೀವ್ರವಾಗಿ ಪ್ರತಿಭಟಿಸಿತು."

ಎಂಬುದಾಗಿ ಲೆಬನಾನ್‌ನಿಂದ ಇದೀಗ ದೆಹಲಿಗೆ ಬಂದ ಮಹಿಳೆಯೊಬ್ಬಾಕೆ ಐ.ಪಿ.ಎ ಸುದ್ದಿಗಾರರೊಂದಿಗೆ ಮಾತನಾಡುತ್ತ ಅಲ್ಲಿಯ ಪರಿಸ್ಥಿತಿಯನ್ನು ತಾನು ಕಣ್ಣಾರೆ ಕಂಡಹಾಗೆ ವಿವರಿಸಿದ್ದಾರೆ. ಈ ಮಹಿಳೆ ತನ್ನ ಹೆಸರನ್ನು ಪತ್ರಿಕೆಗಳಿಗೆ ಪ್ರಕಟಿಸಲು ಇಚ್ಛಿಸಿಲ್ಲ.

ಅಧ್ಯಕ್ಷ ಷಾಮೂನ್‌ರ ಆಳ್ವಿಕೆ ಬೇಕಾಗಿಲ್ಲ

ಈ ಅನಾಮಿಕ ಮಹಿಳೆ ಬೈರೂತ್‌ನಲ್ಲಿಯ ಸ್ಥಿತಿಗತಿಯನ್ನು ಹೇಳುತ್ತ "ಅಮೇರಿಕೆಯ ಸೈನ್ಯಪಡೆಗಳು ಸರಕಾರಿ ಕಛೇರಿಗಳನ್ನೆಲ್ಲ ರಕ್ಷಿಸುತ್ತಿವೆ. ಅಧ್ಯಕ್ಷರ ಅರಮನೆ, ಪಾರ್ಲಿಮೆಂಟ್ ಹೌಸ್ ಇಲ್ಲೆಲ್ಲ ಬಲವಾದ ಕಾವಲಿದೆ" ಎಂದು ಹೇಳಿದರು. ಮುಂದುವರಿಯುತ್ತ ಹೀಗೆ ಹೇಳಿದರು:

"ಲೆಬನಾನ್‌ನ ರಾಷ್ಟ್ರಭಕ್ತರಿಗೂ ಕಾಲೂರಿದ ಅಮೇರಿಕನ್ ಸೈನಿಕರಿಗೂ ಆಗಾಗ ಘರ್ಷಣೆಗಳು ನಡೆದುವು. ವಿದೇಶಿ ಹಸ್ತಕ್ಷೇಪದ ಬಗ್ಗೆ ಲೆಬನಾನ್ ಜನತೆಯ ಪ್ರತಿಕ್ರಿಯೆ ಏನೆಂಬುದನ್ನು ಇದು ತೋರಿಸುತ್ತದೆ.

"ಲೆಬನಾನ್ ಸೈನ್ಯಪಡೆ ಅಧ್ಯಕ್ಷ ಷಾಮೂನ್‌ರ ಆಳ್ವಿಕೆಯನ್ನು ಉಳಿಸಿಕೊಳ್ಳಲು ಮನಸ್ಸಿಲ್ಲದ್ದಾಗಿದೆ. ಅಮೇರಿಕಾ ಸೈನ್ಯ ಬಂದ ಮೇಲಂತೂ ಈ ನಿರ್ಧಾರ ಇನ್ನೂ ಬಿರುಸಾಗಿದೆ."

ಯು. ಎನ್. ಪೋಲೀಸ್ ಪಡೆಯೂ ಬೇಡ !

ಲೆಬನಾನ್ ಸೋಷಿಯಲಿಸ್ಟ್ ನಾಯಕ ಕ್ಲೋವಿಸ್ ಮ್ಯಾಕ್‌ಸೌದ್ ಐ. ಪಿ. ಎ. ಸುದ್ದಿಗಾರನಿಗಿತ್ತ ಸಂದರ್ಶನದಲ್ಲಿ "ಅಮೆರಿಕೆಯ ಸೈನ್ಯ ಮೊದಲು ತೊಲಗಬೇಕು. ವಿದೇಶಿ ಸೈನ್ಯಗಳು ಅಲ್ಲಿರುವವರೆಗೆ ಸ್ವತಂತ್ರ ಚುನಾವಣೆಗಳು ಸಾಧ್ಯವಿಲ್ಲ". (ಅಧ್ಯಕ್ಷಸ್ಥಾನಕ್ಕೆ ಚುನಾವಣೆ ನಡೆಯಲಿದೆ.) ಎಂದ ಅವರು "ಅಮೇರಿಕೆಯ ಸೈನ್ಯದ ಬದಲು ಯು. ಎನ್. ಪೋಲೀಸ್ ಪಡೆ ಇರಬೇಕೆಂಬ ಸಲಹೆಯನ್ನೂ ರಾಷ್ಟ್ರೀಯ ರಂಗವು ಸ್ವೀಕರಿಸಲು ಸಿದ್ಧವಿಲ್ಲ. ಅಮೇರಿಕೆಯು ನಮ್ಮ ಮೇಲೆ ಪೋಲಿಸ್ ಪಡೆಯನ್ನು ಬಲವಂತದಿಂದ ಹೇರುವುದು ಸಾಧ್ಯವಿಲ್ಲ."

ಗೊತ್ತುಗುರಿಯಿಲ್ಲದ ಗೋರ್ವಾಲ ವರದಿ

ರಾಜ್ಯದ ಆಡಳಿತ ಯಂತ್ರವನ್ನು ಸುಧಾರಿಸುವ ದೃಷ್ಟಿಯಿಂದ, ಸೂಕ್ತವಾದ ಶಿಫಾರಸುಗಳನ್ನು ಮಾಡಲು ನಿಯಮಿತವಾಗಿದ್ದ ಶ್ರೀ ಎ. ಡಿ. ಗೋರ್ವಾಲರವರು ಹಲವರು ತಿಂಗಳು ವ್ಯವಸಾಯ ಮಾಡಿ ಇದೀಗ ತಮ್ಮ 'ಅಮೂಲ್ಯ' ವರದಿಯನ್ನು ಸರಕಾರಕ್ಕೆ ಒಪ್ಪಿಸಿದ್ದಾರೆ. ಒಂಭತ್ತು ವಿಭಾಗಗಳಿಂದ ಕೂಡಿರುವ ಎಪ್ಪತ್ತೆಂಟು ಪುಟಗಳ ವರದಿಯನ್ನು ಮೊದಲಿನಿಂದ ಕೊನೆಯ ವರೆಗೆ ಓದಿದಲ್ಲಿ, ಒಂದು ಕೆಟ್ಟ ಪ್ರಬಂಧದಂತಿದೆ. ರಾಜ್ಯ ಪುನರ್ವಿಂಗಡನೆಯ ನಂತರ ಉದ್ಭವಿಸಿದ ನೂತನ ರಾಜ್ಯದಲ್ಲಿನ ಆಡಳಿತೆ ಯಂತ್ರದಲ್ಲಿ ಹಿಂದಿನಿಂದ ಬಂದಿರುವ ಮಂದಗತಿಯನ್ನು ಆಳವಾಗಿ ಪರಿಶೀಲಿಸುವುದಾಗಲೀ, ಯೋಜನೆಯನ್ನು ಕಾರ್ಯಗತಗೊಳಿಸುವುದರಲ್ಲಿ ಆಡಳಿತೆ ಯಂತ್ರವನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಹೊಂದಿಸುವ ದೃಷ್ಟಿಕೋಣವಾಗಲೀ ವರದಿಯ ಕರ್ತರಿಗೆ ಇದ್ದಂತೆ ಕಾಣುವುದಿಲ್ಲ, ಅಷ್ಟೇ ಅಲ್ಲ ಇಲ್ಲವೆಂದೇ ಧಾರಾಳವಾಗಿ ಹೇಳಬಹುದು.

ಆಡಳಿತ ಯಂತ್ರದಲ್ಲಿ ಬೇರೂರಿರುವ ಮಂದಗತಿ, ಅಧಿಕಾರಶಾಹಿತ್ವ, ಲಂಚಗುಳಿತನ ಮೊದಲಾದ ಅನೇಕ ವಿಷಯಗಳನ್ನು ಗೋರ್ವಾಲರವರು ತಿಳಿಸಿದ್ದಾರೆ. ಇವೆಲ್ಲ ತಿಳಿದಿರುವ ವಿಷಯವೇ ಹೊರತು ಹೊಸತೇನಲ್ಲ. ಶಾನುಭೋಗರಿಂದ ಹಿಡಿದು ಮಂತ್ರಿಗಳ ವರೆಗೆ ಹೋದರೂ ಉತ್ತರ ದೊರಕುವುದು ಕಷ್ಟ, ದಿನಗಳು, ತಿಂಗಳುಗಳು, ವರ್ಷಗಳು ಕಳೆದರೂ ಜವಾಬಿಲ್ಲ, ಎಂದು ವರದಿಯಲ್ಲಿ ಅವರು ನಾಗರಿಕರೊಬ್ಬರ ನುಡಿಯನ್ನು ಉಲ್ಲೇಖಿಸಿದ್ದಾರೆ. ಇದು ವಾಸ್ತವವಾದ ವಿಷಯ. ಆದರಿಂದಾಗಿಯೇ ಇಂಥ ನ್ಯೂನತೆಗಳನ್ನು ನಿವಾರಿಸುವ ಮಾರ್ಗ ತೋರಲು ಅವರ ನೇಮಕವಾಗಿದ್ದು. ಆದರೆ ಗೋರ್ವಾಲರವರು ಇದಕ್ಕೆ ಸೂಕ್ತವಾದ ಉತ್ತರವನ್ನು ತಾವೇ ನೀಡಿಲ್ಲ. ಇಡೀ ವರದಿಯಲ್ಲಿ ಅವರು ಮಾಡಿರುವ ಶಿಫಾರಸುಗಳು ಎನ್ನಿಸಿಕೊಳ್ಳುವುದೆಂದೂ ಸ್ಪಷ್ಟವಾಗಿಲ್ಲ. ಆಡಳಿತದಲ್ಲಿ ಮಿತವ್ಯಯ ಮಾಡುವ ಬಗ್ಗೆ ಮೇಲೆ ಮೇಲೆ ಅಲ್ಲಲ್ಲಿ ಕೆಲವು ಶಿಫಾರಸುಗಳನ್ನು ಮಾಡಿದ್ದಾರೆ. ಅದೂ ಸಹ ನಿರರ್ಥಕವಾದದೂ ನಿಷ್ಪ್ರಯೋಜಕವಾದುದೂ ಆಗಿದೆ.

ಆಡಳಿತೆಯನ್ನು ಪ್ರಜಾಪ್ರಭುತ್ವಗೊಳಿಸುವ, ಆಡಳಿತಗಾರರಿಗೂ ಜನತೆಗೂ ಸಂಪರ್ಕ ಬೆಳೆಸುವಂಥ, ಸಮಸ್ಯೆಗಳನ್ನು ಸುಗಮವಾಗಿ ಪರಿಹರಿಸುವಂಥ ದೃಷ್ಟಿಕೋಣವೇ ವರದಿ ಕರ್ತರಿಗಿಲ್ಲದಿರುವುದು ಈ ಆಭಾಸಕ್ಕೆ ಕಾರಣವಾಗಿದೆ. ಗೋರ್ವಾಲರವರು ತಮ್ಮ ವರದಿಯಲ್ಲೊಂದು ಕಡೆ ಪ್ರಜಾಪ್ರಭುತ್ವದ ಬಗ್ಗೆ ಈ ರೀತಿ ಹೇಳಿದ್ದಾರೆ; "ಯಾವನೇ ಪ್ರಜೆಯಾಗಲಿ ಮಂತ್ರಿಗಳನ್ನೂ ಒಳಗೊಂಡು ರಾಜ್ಯಾಡಳಿತಾಧಿಕಾರಿಗಳಿಗೆ ಏನಾದರೂ ಅರ್ಜಿ ಬರೆದುಕೊಂಡಲ್ಲಿ ಶೀಘ್ರವಾಗಿ ಸ್ಪಷ್ಟವಾದ ಮತ್ತು ಸಮರ್ಪಕವಾದ ಉತ್ತರ ಬರುವಂತಾದಲ್ಲಿ ಆಗ ಪ್ರಜಾಪ್ರಭುತ್ವವು ವಾಸ್ತವವಾಗುತ್ತದೆ". ಪ್ರಜಾಪ್ರಭುತ್ವ ಆಡಳಿತೆಯಲ್ಲಿ ಇದೂ ಒಂದಾದರೂ, ಇದೇ ಪ್ರಧಾನವಾದುದಲ್ಲ. ಜನತೆ ಆಡಳಿತೆಯಿಂದ ಅಪೇಕ್ಷಿಸುವುದು ಕೇವಲ ಉತ್ತರವನ್ನಲ್ಲ ಆದರೆ ಕಾರ್ಯನಿರ್ವಹಣೆಯನ್ನು ಪ್ರಜಾಪ್ರಭುತ್ವ ಆಡಳಿತೆಯೆಂದಲ್ಲಿ ಜನತೆಯ ಹಿತಗಳಿಗಾಗಿ ದುಡಿಯುವಂಥ ಆಡಳಿತೆ ಎಂದರ್ಥ. ಆಡಳಿತದ ಪ್ರತಿಯೊಂದು ಹಂತದಲ್ಲಿಯೂ ಜನತೆಯನ್ನೂ ಭಾಗಿಯಾಗಿ ಮಾಡುವಂತೆ ಸಂಯೋಜಿಸುವುದೇ ಅದರ ಉದ್ದಿಶ್ಯ. ರಾಷ್ಟ್ರವು ಅಭಿವೃದ್ಧಿ ಯೋಜನೆಯ ಪಥದಲ್ಲಿ ಕಾಲಿರಿಸಿರುವಾಗ ಈ ಅಂಶ ಪ್ರಾಮುಖ್ಯವಾದುದಾಗಿದೆ. ಯೋಜನೆಯನ್ನು ಕಾರ್ಯಗತಗೊಳಿಸುವುದರಲ್ಲಿ ಎಷ್ಟು ದೂರದ ವರೆಗೆ ಆಡಳಿತೆ ನಿರ್ವಹಣೆಯಲ್ಲಿ ಜನತೆಯನ್ನೂ ಒಂದುಗೂಡಿಸಬಹುದು ಎನ್ನುವುದು ಯಾವುದೇ ಸುಧಾರಣೆಯ ಉದ್ದಿಶ್ಯವಾಗಿರಬೇಕು. ವರದಿಯ ಯಾವ ಭಾಗದಲ್ಲೂ ಗೋರ್ವಾಲರವರು ಈ ಪ್ರಶ್ನೆಗೆ ಗಮನ ಕೊಟ್ಟಂತೆ ಕಾಣುವುದಿಲ್ಲ ಎಂಬುದು, ಸೆಕ್ರೆಟೇರಿಯಟ್‌ನ ಆಡಳಿತೆಯ ಬಗ್ಗೆ ಅವರು ಮಾಡಿರುವ ಕೆಲವು ಶಿಫಾರಸುಗಳಿಂದ ಕಾಣಬರುತ್ತದೆ.

ಸೆಕ್ರೆಟೇರಿಯಟ್‌ನ ಆಡಳಿತೆಯ ಬಗ್ಗೆ ಬರೆಯುತ್ತ ವರದಿಯಲ್ಲಿ ಗೋರ್ವಾಲರವರು ಕೆಲವು ಸಲಹೆಗಳನ್ನಿತಿದ್ದಾರೆ. ಸರಕಾರದ ಇಲಾಖೆಗಳ ಕಾರ್ಯದರ್ಶಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಹೇಳಿದ್ದಾರೆ. ಉಪಕಾರ್ಯದರ್ಶಿಗಳ ಮತ್ತೊಂದು ತಂಡವನ್ನು ಉಂಟುಮಾಡಬೇಕೆಂದು ಸಲಹೆ ಮಾಡಿದ್ದಾರೆ. ಪ್ರಶ್ನೆಗಳನ್ನು ಇತ್ಯರ್ಥ ಮಾಡಲು ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡುವುದರಿಂದ ಫೈಲುಗಳ ವಿಲೇವಾರಿ ಶೀಘ್ರವಾಗುವುದೆಂದೂ ಹೇಳಿದ್ದಾರೆ. ಇದೇ ರೀತಿಯಲ್ಲಿ ಅವರು ಇನ್ನೂ ಕೆಲವು ಸಣ್ಣಪುಟ್ಟ ಸಲಹೆಗಳನ್ನೂ ಮಾಡಿದ್ದಾರೆ. ಅವರ ಈ ಸಲಹೆಗಳನ್ನು ಒಪ್ಪಿಕೊಂಡು ಜಾರಿಗೆ ತಂದಲ್ಲಿ ಅದು ಈಗಿರುವುದಕ್ಕಿಂತ ಹೆಚ್ಚಿನ ನೌಕರಶಾಹಿತ್ವಕ್ಕೆ ಮತ್ತು ಅವಾಂತರಕ್ಕೆ ಎಡೆಗೊಡುತ್ತದೆ ಅಷ್ಟೆ.

ಒಟ್ಟಿನಲ್ಲಿ ಹೇಳಬೇಕಿದ್ದಲ್ಲಿ ಗೋರ್ವಾಲರವರ ವರದಿ 'ಬೆಟ್ಟ ಕಡಿದರೆ ಇಲಿ ಹೊರಬಂತು' ಎನ್ನುವ ನಾಣ್ಣುಡಿಯಂತಿದೆ. ಇಂಥ ಅಸಮರ್ಪಕವಾದ ವರದಿಯನ್ನು ಸಿದ್ಧಗೊಳಿಸಲು ಇಷ್ಟು ಕಾಲ, ಸಿಬ್ಬಂದಿ ಎಲ್ಲ ಏಕೆ ಬೇಕಾಯಿತು ಎಂಬುದು ತಿಳಿಯದಾಗಿದೆ. ವರದಿ ಸಿದ್ಧಗೊಳಿಸುವುದಕ್ಕೆ ವೆಚ್ಚ ಮಾಡಲಾಗಿರುವ ಹಣವು ಸಾರ್ವಜನಿಕ ಬೊಕ್ಕಸದಿಂದ ಪೋಲಾಗಿದೆ ಅಷ್ಟೆ.

ನೆರೆರಾಜ್ಯವಾದ ಕೇರಳದಲ್ಲಿಯೂ ಸಹ ಆಡಳಿತ ಯಂತ್ರ ಸುಧಾರಣೆಗಾಗಿ ಒಂದು ಸಮಿತಿ ನೇಮಕವಾಗಿದೆ. ಅದರ ಶಿಫಾರಸುಗಳು ಶೀಘ್ರವಾಗಿ ಹೊರಬರಲಿದೆ. ಸರಕಾರದ ಪ್ರಕಟಣೆಯಲ್ಲಿ, ಸಮಿತಿಯ ಶಿಫಾರಸುಗಳು, ಅಧಿಕಾರದ ವಿಕೇಂದ್ರೀಕರಣ, ಗ್ರಾಮ ಪಂಚಾಯಿತ್ತಿಗಳಿಂದ ಹಿಡಿದು ಎಲ್ಲ ಮಟ್ಟಗಳಲ್ಲೂ ಚುನಾಯಿತ ಪ್ರತಿನಿಧಿಗಳ ಮಂಡಲಿಗಳಿಗೆ ಹೆಚ್ಚಿನ ಅಧಿಕಾರ ಕೊಡುವುದು, ಸರಕಾರದ ವಿವಿಧ ಖಾತೆಗಳಲ್ಲಿ ಎಲ್ಲ ಮಟ್ಟಗಳಲ್ಲೂ ಸಂಬಂಧವನ್ನೇರ್ಪಡಿಸಿ ಕಾಲ ವಿಳಂಬವನ್ನು ಪರಿಹರಿಸುವುದು, ಮಿತವ್ಯಯಾಚರಣೆ, ದ್ವಿತೀಯ ಯೋಜನೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಆಡಳಿತೆ ಯಂತ್ರವನ್ನು ಸುಧಾರಿಸುವುದು, ಸರಕಾರದ ಎಲ್ಲ ಮಟ್ಟಗಳಲ್ಲೂ ಸಾರ್ವಜನಿಕರ ಸಹಕಾರ ಪಡೆಯುವುದು, ಅಧಿಕಾರಿಗಳಲ್ಲಿ ದಕ್ಷತೆ, ಸರಕಾರಿ ನೌಕರರ ಕೆಲಸ ಮತ್ತು ಜೀವನಸ್ಥಿತಿಯನ್ನು ಉತ್ತಮಗೊಳಿಸುವುದು ಇತ್ಯಾದಿ ಮುಖ್ಯ ವಿಷಯಗಳನ್ನು ಅದು ಒಳಗೊಂಡಿರುವುದು ಎಂದು ತಿಳಿಸಿದೆ. ಮೈಸೂರು ಸರಕಾರವೂ ಸಹ ಇದೇ ಬಗೆಯ ನೀತಿಯನ್ನು ಪಾಲಿಸಿದ್ದಲ್ಲಿ ದೃಷ್ಟಿಕೋಣವಿರಿಸಿಕೊಂಡಿದ್ದಲ್ಲಿ ಸರಿಯಾಗಿರುತ್ತಿತ್ತು.

ಹಾಗಿಲ್ಲದಿರುವಾಗ ಗೋರ್ವಾಲರವರು ಸಿದ್ಧಗೊಳಿಸಿರುವ ವರದಿಯು ಯಾವ ಪ್ರಯೋಜನಕ್ಕೂ ಬಾರದಿದೆ. ಆಡಳಿತ ಯಂತ್ರವನ್ನು ಸುಧಾರಿಸುವ ಹೆಸರಿನಲ್ಲಿ ಇದು ಸರಕಾರದ ಕಣ್ಣುಮುಚ್ಚಾಲೆ ಆಟವಾಗಿದೆ.

ಸಾಗರ ಜಲದಿಂದ ಸುವರ್ಣ ದೊರೆಯುತ್ತದೆ

ಪ್ರತಿಯೊಬ್ಬರೂ ಎರಡು ಪೌಂಡ್ ಚಿನ್ನ ಹೊಂದಿರುವ ಕಾಲ ಬಂದೀತು !

— ರಷ್ಯನ್ ವಿಜ್ಞಾನಿ ಎಸ್. ಸ್ಕಾಚ್ಕೋವ್ ಅವರ ಹೇಳಿಕೆ —

ನೀವು ಕುಡಿಯುವ ನೀರಿನಲ್ಲಿ ಚೊಕ್ಕ ಚಿನ್ನದ ಸ್ವಲ್ಪ ಅಂಶವು ಇರುತ್ತದೆ. ಅದರ ಪ್ರಮಾಣವು ಅತ್ಯಂತ ಸೂಕ್ಷ್ಮವಾಗಿರುತ್ತದೆಂಬುದು ನಿಜ. ಅತ್ಯಂತ ಸೂಕ್ಷ್ಮಗ್ರಾಹಿ ಉಪಕರಣಗಳ ಮುಖಾಂತರ ಮಾತ್ರವೇ ಇದನ್ನು ಕಂಡುಹಿಡಿಯಲು ಸಾಧ್ಯ.

ಈ ವಿಷಯವನ್ನು ಕುರಿತು ಸೋವಿಯೆತ್ ವಿಜ್ಞಾನಿ ದೊವನ್‌ಕೋವ್‌ರವರು ಈ ಕೆಳಗಿನಂತೆ ಹೇಳುತ್ತಾರೆ.

"ಬಂಗಾರವು ಸಮುದ್ರಗಳ ಮತ್ತು ಸಾಗರಗಳ ನೀರಿನಲ್ಲಿಯೂ ಕೂಡಾ ಕಂಡುಬರುತ್ತದೆ. ಒಂದು ಘಟ ಮೀಟರಿಗೆ ಸರಾಸರಿ ಸುಮಾರು 5 ಮಿಲಿಗ್ರಾಮುಗಳಷ್ಟು ಚಿನ್ನವು ಸಮುದ್ರದ ನೀರಿನಲ್ಲಿ ಇರುತ್ತದೆ. ಸಮುದ್ರ-ಸುವರ್ಣದ ಮೊದಲ ಹಳಕುಗಳನ್ನು ಈಗಾಗಲೇ ಪಡೆದದ್ದಾಗಿದೆ.

"ಸಮುದ್ರ ಜಲವು ಅನೇಕ ಇತರ ಲೋಹಗಳ-'ಪ್ಲಾಟಿನಂ', ಬೆಳ್ಳಿ, 'ಪಲ್ಲಾಡಿಯಂ' ಮುಂತಾದ ಲೋಹಗಳ—ಮತ್ತು 'ರೇಡಿಯಂ', 'ಟಿಟೇನಿಯಂ' ಮತ್ತು 'ಜೆರ್ಮೇನಿಯಂ'ಗಳಂತಹ ಅಪೂರ್ವ ಲೋಹಗಳ—ಲವಣಗಳನ್ನೂ ಸಹ ಹೊಂದಿರುತ್ತದೆ.

"ಭೂಖಂಡದ ಶಿಲೆಗಳಿಂದ ಭೂಜಲ ಮಾರ್ಗಗಳ ಮೂಲಕವೂ ಮತ್ತು ಖನಿಜ ಜಲದ ಚಿಲುಮೆಗಳ ಮೂಲಕವೂ, ಇತರ ಲೋಹಗಳಂತೆಯೇ ಚಿನ್ನವೂ ತೊಳೆಯಲ್ಪಟ್ಟು ಪ್ರವಹಿಸುತ್ತದೆಯೆಂಬುದನ್ನು ಮನಗಂಡು ಜನರು ಬಹುಕಾಲದಿಂದಲೂ ಸಮುದ್ರದ ನೀರಿನಿಂದ ಚಿನ್ನವನ್ನು ಪಡೆಯಲು ಪ್ರಯತ್ನಪಟ್ಟಿದ್ದಾರೆ. ಈ ಪ್ರಯತ್ನಗಳು ಸಫಲವಾಗಲಿಲ್ಲ. ಆದರೆ ನೀರಿನಿಂದ ಚಿನ್ನವನ್ನು ಪಡೆಯಲು ಸಾಧ್ಯವಿದೆಯೆಂಬ ಭಾವನೆಯು ಮಾತ್ರ ವಿಜ್ಞಾನಿಗಳ ಮನಸ್ಸಿನಲ್ಲಿ ಕೆಲಸ ಮಾಡುತ್ತಲೇ ಇತ್ತು. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ, ಜಗತ್ತಿನ ಸಾಗರ ಜಲದಿಂದ ಚಿನ್ನವೆಲ್ಲವನ್ನೂ ಸಂಗ್ರಹಿಸಿಕೊಂಡದ್ದಾದರೆ, ಭೂಮಿಯ ಮೇಲೆ ಪ್ರತಿಯೊಬ್ಬ ನಿವಾಸಿಗೂ ಸುಮಾರು ಎರಡು ಕಿಲೋಗ್ರಾಮುಗಳಷ್ಟು (ಕಿಲೋಗ್ರಾಂ= 2.205 ಪೌ.) ಈ ಅಮೂಲ್ಯ ಲೋಹವು ಸಿಕ್ಕುವುದು !

"ಮಾಸ್ಕೋ ನಗರದ ರಾಸಾಯನಿಕ ಯಂತ್ರಕಲಾ ವಿದ್ಯಾಲಯವು ಸಮುದ್ರ ಜಲದಿಂದ ಚಿನ್ನವನ್ನು ತೆಗೆಯುವ ಅಗ್ಗವಾದ ಮತ್ತು ಅನುಕೂಲವಾದ ವಿಧಾನವನ್ನು ವಿಕಾಸಗೊಳಿಸಿದೆ. ಪ್ರಾಥಮಿಕ ಪ್ರಯೋಗಗಳನ್ನು ಚರಂಡಿ ನೀರಿನ ಮೇಲೆ ಮಾಡಲಾಯಿತು ಈಗಾಗಲೇ ಮಾಸ್ಕೋ, ಲೆನಿನ್‌ಗ್ರಾಡ್, ತಲ್ಲಿನ್, ಅದ್ಯೆಸ್ಸಾ ಮತ್ತು ಇನ್ನಿತರ ನಗರಗಳಲ್ಲಿ ಈ ನೀರಿನಿಂದ ಚಿನ್ನವನ್ನು ತೆಗೆಯುವುದರ ಸಲುವಾಗಿ ರಾಳದ ವಿನಿಮಯ ವ್ಯವಸ್ಥೆಯ ಶೋಧಕ ಯಂತ್ರ ಸ್ಥಾವರಗಳು ಪೂರ್ಣರೂಪದಲ್ಲಿ ಸಮರ್ಥನೀಯವಾಗಿ ಕೆಲಸ ಮಾಡುತ್ತಿವೆ. ಆದರೆ ಸೋವಿಯೆತ್ ವಿಜ್ಞಾನಿಗಳು ಸಂಶೋಧನಾ ಮಾರ್ಗಗಳನ್ನು ಮುಂದುವರಿಸುತ್ತಾ, ಸಮುದ್ರ ಜಲದಿಂದ ಸುವರ್ಣವನ್ನು ಸಂಗ್ರಹಿಸಿಕೊಳ್ಳಲು ಕಾರ್ಯೋನ್ಮುಖರಾಗಿದ್ದಾರೆ.

"ವಿಭಿನ್ನ ಮೂಲಾಣುಗಳನ್ನು ಆಯ್ಕೆಯ ಕ್ರಮದಲ್ಲಿ ಹೀರಿಕೊಳ್ಳಲು ಸಮರ್ಥವಾದ ರಾಳದ ವಿನಿಮಯ ಸಾಧನಗಳೊಡನೆ (ರೆಸಿನ್ ಎಕ್ಸ್‌ಚೇಂಜರ್ಸ್) ಅನೇಕ ಪ್ರಯೋಗಗಳನ್ನು ನಡೆಸಲಾಯಿತು. ಶಾಂತ ಸಾಗರದಲ್ಲಿ (ಪೆಸಿಫಿಕ್-ಸಮುದ್ರ) ಸಂಚರಿಸುತ್ತಿದ್ದ ಸಂಶೋಧನಾ ನೌಕೆಯೊಂದರಲ್ಲಿ, ರಾಳದ ವಿನಿಮಯ ಸಾಧನಗಳ ಸಹಾಯದ ಮೂಲಕ, ಸಮುದ್ರ ಜಲವನ್ನು ಶೋಧಿಸಿ ಚಿನ್ನವನ್ನು ಪಡೆಯುವ ಸಾಧ್ಯತೆಗಾಗಿ ಪರೀಕ್ಷಾಪ್ರಯೋಗಗಳನ್ನು ನಡೆಸಲಾಯಿತು.

"ಈ ಶೋಧಕವನ್ನು ಮಾಸ್ಕೋ ನಗರಕ್ಕೆ ವಾಪಸು ತಂದು ಸಂಸ್ಕರಿಸಿದಾಗ ಸಮುದ್ರ ಜಲದಿಂದ ಪಡೆಯಲಾದ ಚೊಕ್ಕ ಚಿನ್ನವನ್ನು ಅದು ನೀಡಿದೆ.

ವಾರದ ವಾರ್ತಾ ಸಮೀಕ್ಷೆ

ಬಂದರು ಮತ್ತು ಹಡಗುಕಟ್ಟೆ ಕೆಲಸಗಾರರ ಬಗ್ಗೆ ಸರಕಾರದ ವಚನ ಭಂಗ

ಭಾರತ ಸರಕಾರವು ಬಂದರು ಮತ್ತು ಹಡಗುಕಟ್ಟೆ ಕೆಲಸಗಾರರ ಬೇಡಿಕೆಗಳ ಬಗ್ಗೆ ಚೌಧುರಿ ಸಮಿತಿಯ ವರದಿಯನ್ನು ಒಪ್ಪಿಕೊಂಡಿರುವುದಾಗಿ ತಿಳಿಸಿದ್ದರೂ, ಶಿಫಾರಸಿನಲ್ಲಿರುವ ಒಂದೆರಡು ಅಂಶಗಳನ್ನು ಹೊರತು ಬಾಕಿ ಉಳಿದುದನ್ನು ತಳ್ಳಿಹಾಕಿದೆ. ನೌಕರರ ವರ್ಗೀಕರಣದ ಬಗ್ಗೆ ಮತ್ತು ವಿಂಗಡನೆಯ ಬಗ್ಗೆ ಒಂದು ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ಶಿಫಾರಸುಗಳು ನೌಕರರ ಮೇಲೂ ಹಾಗೂ ಮಾಲಿಕರ ಮೇಲೂ ನಿರ್ಬಂಧವಾಗಿರುತ್ತದೆ ಎಂದು ತಿಳಿಸಲಾಗಿದೆ. ಪರಿಷ್ಕೃತ ವೇತನಗಳು ಅಕ್ಟೋಬರ್ ೧, ೧೯೫೭ ರಿಂದ ಜಾರಿಗೆ ಬರಲಿದೆ.

ಸರಕಾರದ ಈ ತೀರ್ಮಾನಗಳ ಬಗ್ಗೆ ನೌಕರರ ಸಂಘವು ತನ್ನ ಅತೃಪ್ತಿಯನ್ನು ಪ್ರಕಟಗೊಳಿಸಿದೆ. ಪಂಡಿತ ನೆಹರೂರವರೊಂದಿಗೆ ಸಮಾಲೋಚನೆ ನಡೆಸಿದ ನಂತರ ಸಭೆ ಸೇರಿದ್ದ ನೌಕರರ ಸಂಘದ ಕಾರ್ಯಕಾರೀ ಸಮಿತಿಯು ಈ ಬಗ್ಗೆ ಇತ್ತಿರುವ ಹೇಳಿಕೆಯೊಂದರಲ್ಲಿ ಸರಕಾರವು ನೌಕರರ ಸಂಘಕ್ಕೆ ಇತ್ತಿದ್ದ ಭರವಸೆಯನ್ನು ಉಲ್ಲಂಘಿಸಿದೆ ಎಂದು ತಿಳಿಸಿದ್ದಾರೆ. ಹಡಗುಕಟ್ಟೆ ಅಧಿಕಾರಿಗಳಿಂದ ಕೆಲಸಗಾರರು ಕೆಲಸದಿಂದ ತೆಗೆದು ಹಾಕಲ್ಪಡುವುದಿಲ್ಲವೆಂದು ಭರವಸೆಯಿಯಾಯಲಾಗಿದ್ದರೂ, ಅದು ಇಂದೂ ನಡೆಯುತ್ತಿದೆ. ಮುಖ್ಯವಾಗಿ ಕಲ್ಕತ್ತಾದಲ್ಲಿ ಕೆಲಸಗಾರರನ್ನು ಹೆಚ್ಚು ಸಂಖ್ಯೆಯಲ್ಲಿ ನಜಾಮಾಡಲಾಗಿದೆ. ನೌಕರರು ಇದರ ವಿರುದ್ಧ ಚಳವಳಿ ನಡೆಸಬೇಕೆಂದು ಕಾರ್ಯಕಾರೀ ಸಮಿತಿಯು ಕರೆಯಿತ್ತಿದೆ.

ಸರಕಾರದ ತೀರ್ಮಾನದಂತೆ ಕೆಲಸಗಾರರಿಗೆ ದೊರೆತಿರುವ ಅಲ್ಪ ಸೌಕರ್ಯವನ್ನು ಸ್ವಾಗತಿಸಿ, ಕೆಲಸಗಾರರು ಚೌಧುರಿ ಸಮಿತಿಯಲ್ಲಿ ಮಾಡಲಾಗಿರುವ ಶಿಫಾರಸುಗಳು ಪೂರ್ಣವಾಗಿ ಜಾರಿಗೆ ತರುವಂತೆ ಮಾಡಲು ತಮ್ಮ ಚಳವಳಿಯನ್ನು ಮುಂದುವರಿಸಬೇಕೆಂದು ಕರೆಯಿಯಾಲಾಗಿದೆ. ನೌಕರರ ಸಂಘವು ಮುಂದೆ ಯಾವ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಲು ಆಗಸ್ಟ್ ತಿಂಗಳ ಎರಡನೆ ವಾರದಲ್ಲಿ ವಿಶೇಷ ಸಮ್ಮೇಳನವನ್ನು ನಡೆಸಲು ಸಮಿತಿಯು ತೀರ್ಮಾನಿಸಿದೆ.

ಉತ್ತರ ಪ್ರದೇಶದಲ್ಲಿ ಕಳವಳಕರ ಆಹಾರ ಪರಿಸ್ಥಿತಿ

ಉತ್ತರ ಪ್ರದೇಶದ ಆಹಾರ ಪರಿಸ್ಥಿತಿಯು ತೀವ್ರಗೊಂಡು ಕಳವಳಕ್ಕೆ ಕಾರಣವಾಗಿದೆ. ಅನೇಕ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಏರ್ಪಟ್ಟು, ಜನತೆ ಪರಿತಪಿಸುತ್ತಿದ್ದಾರೆ. ಸರಕಾರವು ಸೂಕ್ತವಾದಕ್ರಮ ತೆಗೆದುಕೊಳ್ಳುವ ಬದಲಾಗಿ, ಮೇಲಿಂದ ಮೇಲೆ ಕಣ್ಣೊರೆಸುವ ಹೇಳಿಕೆಗಳನ್ನೀಯುತ್ತದೆ. ಕಂಟ್ರೋಲ್ ಮತ್ತು ರೇಷನ್ ಪದ್ಧತಿ ಜಾರಿಗೆ ತರಬೇಕಾಗುವ ಪರಿಸ್ಥಿತಿ ಒದಗಿಬಂದಿದೆಯೆಂದು ತಿಳಿದುಬಂದಿದೆ. ಆದರೆ ಸರಕಾರವು ಏನೇ ಆದರೂ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತರುವುದಿಲ್ಲವೆಂದು ಘೋಷಿಸಿದೆ.

ಸರಕಾರದ ಆಹಾರ ನೀತಿಯ ವಿರುದ್ಧವಾಗಿ ಅನೇಕ ಪ್ರದರ್ಶನಗಳು ನಡೆಯುತ್ತಿವೆ. ಕೇಂದ್ರ ಸರಕಾರ ಕೂಡಲೇ ಗಮನಕೊಟ್ಟು, ಪರಿಹಾರ ಕಾರ್ಯವನ್ನು ತೆಗೆದುಕೊಳ್ಳುವುದು ಅತ್ಯಗತ್ಯವಾಗಿದೆ.

ಮೊಸಳೆಯ ಮುಂದೆ ಹೋತನ ಕಣ್ಣೀರು

ನಾಗಪುರದಲ್ಲಿ ಮಾತನಾಡುತ್ತ ಹಣಕಾಸಿನ ಸಚಿವ ಮೊರಾರ್ಜಿಯವರು ಛೇಂಬರ್ ಆಫ್ ಕಾಮರ್ಸ್ ತನ್ನ ಪ್ರಭಾವವನ್ನು ಬಳಸಿ ಆಹಾರ ಬೆಲೆಗಳನ್ನು ಸ್ಥಿಮಿತಗೊಳಿಸಬೇಕೆಂದು ಕರೆಯಿತ್ತಿದ್ದಾರೆ. ಏರುತ್ತಿರುವ ಬೆಲೆಗಳನ್ನು ತಡೆಹಿಡಿಯುವುದರಲ್ಲಿ ನೆರವೀಯಬೇಕೆಂದು ಕೇಳಿಕೊಂಡಿದ್ದಾರೆ. ಬೆಲೆಗಳು ಒಂದೇ ಸಮನಾಗಿ ಏರುತ್ತಿರುವುದರಿಂದಾಗಿ ಸಾರ್ವಜನಿಕರಲ್ಲ ಅತೃಪ್ತಿ ಉಂಟುಮಾಡಿದೆ ಎಂದೂ ತಿಳಿಸಿದ್ದಾರೆ.

ದಾಸ್ತಾನುಗಾರರನ್ನು ಮಟ್ಟಹಾಕಿ, ಸರಿಯಾದ ಕ್ರಮ ತೆಗೆದುಕೊಂಡು ಬೆಲೆಗಳನ್ನು ಹತೋಟಿಗೆ ತರಲು ಸರಕಾರವು ಯತ್ನಿಸಲು ಹಿಂದೆ ಮುಂದೆ ನೋಡುತ್ತಿದೆ ದಾಸ್ತಾನುಮಾಡಿ ಲಾಭದ ದಾಹವನ್ನು ತೀರಿಸಿಕೊಳ್ಳ ಹೊರಟಿರುವ ವರ್ತಕರಲ್ಲಿಯೇ ಬೆಲೆ ಹತೋಟಿಗೆ ತರಲು ನೆರವೀಯಬೇಕೆಂದು ವಿನಂತಿಸಿಕೊಂಡಲ್ಲಿ ಅದು ಎಷ್ಟು ಮಟ್ಟಿಗೆ ಸಹಾಯಕವಾದೀತು? ಮೊರಾರ್ಜಿಯವರ ಭಾಷಣವು 'ತೋಳನ ಮುಂದೆ ಹೋತ ಕಣ್ಣೀರಿಟ್ಟಂತಾಗಿದೆ.'

ಅಮೇರಿಕನ್ ಆಕ್ರಮಣದ ವಿರುದ್ಧ ಭಾರತದ ಜನತೆಯ ಪ್ರತಿಭಟನೆ

ಲೆಬನಾನಿನಲ್ಲಿ ಅಮೇರಿಕಾದ ಸೇನಾಪಡೆಗಳು ಪ್ರವೇಶಿಸಿ, ವಿಶ್ವವನ್ನು ಮಹಾಯುದ್ಧದ ಭೀತಿಯಲ್ಲಿ ಮುಳುಗಿಸಿರುವುದರ ವಿರುದ್ಧವಾಗಿ ಭಾರತದ ನಾನಾ ಭಾಗಗಳ ಜನತೆ ಪ್ರತಿಭಟನಾ ಪ್ರದರ್ಶನ ನಡೆಸಿದ್ದಾರೆ. ಮಧ್ಯಪ್ರಾಚ್ಯದಿಂದ ವಿದೇಶೀ ಸೇನೆಗಳು ಕೂಡಲೇ ಹಿಂತಿರುಗಬೇಕೆಂದು ದೇಶಾದ್ಯಂತ ಸಭೆಗಳು ನಡೆಯುತ್ತಿವೆ.

ಮುಂಬಯಿ, ಕಲ್ಕತ್ತ, ದೆಹಲಿ, ಮದರಾಸು, ಬೆಂಗಳೂರು ಮತ್ತಿತರ ನಗರಗಳಲ್ಲಿ ಅಮೇರಿಕಾದ ರಾಯಭಾರೀ ಕಛೇರಿಗಳ ಮುಂದೆ ಪ್ರದರ್ಶನ ನಡೆದಿದೆ.

ಭಾರತ ಕಮ್ಯೂನಿಸ್ಟ್ ಪಕ್ಷದ ಸೆಕ್ರೆಟೇರಿಯಟ್ಟು ಪ್ರಕಟಣೆಯೊಂದರಲ್ಲಿ ಆಂಗ್ಲೋ—ಅಮೇರಿಕನ್ ಆಕ್ರಮಣಕಾರೀ ನೀತಿಯನ್ನು ಖಂಡಿಸಿ, ಅಮೇರಿಕ ಮತ್ತು ಬ್ರಿಟನ್‌ಗಳು ಕೂಡಲೆ ಜೋರ್ಡಾನ್ ಮತ್ತು ಲೆಬನಾನ್‌ನಿಂದ ಕಾಲ್ತೆಗೆಯಬೇಕೆಂದೂ, ಭಾರತಾದ್ಯಂತ ಜನತೆ ಇದಕ್ಕಾಗಿ ಮೆರವಣಿಗೆ ಮತ್ತು ಪ್ರದರ್ಶನಗಳನ್ನು ನಡೆಸಬೇಕೆಂದೂ ಕರೆಯಿತ್ತಿದೆ.

ಪ್ರಜಾಸೋಷಲಿಸ್ಟ್ ಪಕ್ಷವೂ ಆಕ್ರಮಣವನ್ನು ಖಂಡಿಸಿ ದೇಶಾದ್ಯಂತ ಚಳವಳಿಗೆ ಕರೆಯಿತ್ತಿದೆ.

ಕಮ್ಯೂನಿಸ್ಟ್ ಪಕ್ಷದ ನಾಯಕರೂ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರೂ ಆದ ಭೂಪೇಶಗುಪ್ತರವರು ಪಾರ್ಲಿಮೆಂಟ್ ಅಧಿವೇಶನವನ್ನು ಕೂಡಲೇ ಕರೆದು ಮಧ್ಯಪ್ರಾಚ್ಯ ಪರಿಸ್ಥಿತಿಯನ್ನು ಚರ್ಚಿಸಬೇಕೆಂದು ಸೂಚಿಸಿದ್ದಾರೆ.

ಭಾರತ ಸರಕಾರವು ವಿದೇಶೀ ಸೇನೆಗಳೆಲ್ಲವೂ ಲೆಬನಾನ್ ಮತ್ತು ಮಧ್ಯಪ್ರಾಚ್ಯದಿಂದ ಕಾಲ್ತೆಗೆಯಬೇಕೆಂದು ಘೋಷಿಸಿದೆ.

—"ರಮೇಶ"

ಅಮೇರಿಕೆಯ ಖ್ಯಾತ ನೀಗ್ರೋ ಗಾಯಕ ಪಾಲ್ ರೋಬ್ಸನ್ ಈ ವಾರ ಲಂಡನಿನ ಟೆಲಿವಿಷನ್‌ನಲ್ಲಿ ಕಾಣಿಸಿಕೊಳ್ಳಲಿರುವರು. 1950ರ ಬಳಿಕ ಇದೀಗ ರೋಬ್ಸನ್ ಇಂಗ್ಲೆಂಡಿಗೆ ಬಂದಿದ್ದಾರೆ.

ಅಮೇರಿಕೆಯ ಈ ಪ್ರಮುಖ ಶಾಂತಿವಾದಿ ತಮ್ಮ ಅನೇಕ ಶಾಂತಿಗೀತೆಗಳನ್ನು ಇಂಗ್ಲೆಂಡಿನಲ್ಲಿ ಹಾಡುವರು. ಇಂಗ್ಲೆಂಡಿನಿಂದ ಚೆಕೋಸ್ಲಾವಾಕಿಯಾಕ್ಕೂ ಅಮೇಲೆ ಸೋವಿಯತ್ ರಷ್ಯಕ್ಕೂ ರೋಬ್ಸನ್ ತೆರಳುತ್ತಾರೆ. ಪ್ರಪಂಚದ ನಾನಾ ಕಡೆಗಳಲ್ಲಿ ಈ ಶಾಂತಿವಾದಿ ಶಾಂತಿ ಗೀತೆಗಳನ್ನು ಹಾಡಬೇಕೆಂದಿದ್ದ ಬಯಕೆಯನ್ನು ಅಮೇರಿಕೆಯು ಈವರೆಗೂ ವೀಸಾ ಕೊಡದೆ ಪ್ರತಿಬಂಧಿಸಿತ್ತು.

o o o

ಭಾರತೀಯ ಕಮ್ಯೂನಿಸ್ಟ್ ಪಕ್ಷವು ದೇಶದ ಹಳ್ಳಿಗಾಡಿನಲ್ಲಿ ಹೆಚ್ಚು ಕಾರ್ಯಪ್ರವೃತ್ತವೂ ಪ್ರಭಾವಕಾರಿಯಾಗಿಯೂ ಆಗುವಂತೆ ಯೋಚಿಸಿದೆ. ಕಿಸಾನ ಸಭೆಯ ಸದಸ್ಯರ ಸಂಖ್ಯೆಯನ್ನು ಎರಡು ಮಿಲಿಯಗಿಂತಲೂ ಹೆಚ್ಚಾಗಿಸಲು ನಿರ್ಧರಿಸಿದೆ. ಈ ಗೊತ್ತುವಳಿಯನ್ನು ಇತ್ತೀಚೆಗೆ ಮೂರು ದಿನ ಸೇರಿದ್ದ ಪಾರ್ಟಿ ಸಭೆಯಲ್ಲಿ ತೆಗೆದುಕೊಳ್ಳಲಾಯಿತು.

o o o

ಭಾರತದಲ್ಲಿ ಒಟ್ಟು 49 ಮಿಲಿಯ ಜನ ಜೀವನಾಧಾರ ಕಾರ್ಮಿಕರಿದ್ದು ಇವರಲ್ಲಿ ನೂರಕ್ಕೆ ಐವತ್ತು ಜನರಿಗೆ ಸುಗ್ಗಿ, ಉಳುವುದು ಮುಂತಾದ ಅನಿಯತ ಸಂದರ್ಭಗಳಲ್ಲಿ ಮಾತ್ರವೇ ಕೆಲಸವಿರುತ್ತದೆ.

o o o

ಸೋವಿಯತ್ ರೆಡ್‌ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಸಂಸ್ಥೆಯ ಪರವಾಗಿ ಪ್ರಪಂಚದ ಬೇರೆ ಬೇರೆ ಕಡೆಯಲ್ಲಿ ಆಸ್ಪತ್ರೆಗಳನ್ನು ವ್ಯವಸ್ಥೆ ಪಡಿಸಲಾಗಿದೆ. ಇರಾನ್ ಸರ್ಕಾರದ ಕೋರಿಕೆಯಂತೆ ತೆಹರಾನಿನಲ್ಲಿ 1943ರಲ್ಲಿ ಸೋವಿಯತ್ ಆಸ್ಪತ್ರೆಯನ್ನು ಸ್ಥಾಪಿಸಲಾಯಿತು. ಇಲ್ಲಿ ಈವರೆಗೂ 500,000 ರೋಗಿಗಳು ಚಿಕಿತ್ಸೆ ಪಡೆದಿದ್ದಾರೆ. ಇಥಿಯೋಪಿಯಾದ ಆಡ್ಡಿಸ್ ಅಬಾಬಾನಲ್ಲಿ ಸ್ಥಾಪಿತವಾದ ಆಸ್ಪತ್ರೆಯಲ್ಲಿ ಬರೀ ಇಥಿಯೋಪಿಯಾದ ಮಾತ್ರವಲ್ಲದೆ ಸುತ್ತಲಿನ ಪ್ರದೇಶಗಳ ಜನರೂ ವೈದ್ಯಕೀಯ ಸೌಲಭ್ಯ ಪಡೆಯುತ್ತಿದ್ದಾರೆ. ವೈದ್ಯಕೀಯ ತಜ್ಞರ ತಂಡವೊಂದು ಈಗ ಎರಡು ವರ್ಷಗಳ ಹಿಂದೆ ಭಾರತಕ್ಕೆ ಬಂದಿತ್ತು

ಸ್ವಲ್ಪದರಲ್ಲಿ ಸುದ್ದಿ

ಅಫಘಾನಿಸ್ತಾನದ ರಾಜಧಾನಿ ಕಾಬೂಲಿನಲ್ಲಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಲಾಗಿದೆ.

ಈ ಆಸ್ಪತ್ರೆಗಳಲ್ಲಿ ಕುಲ, ಧರ್ಮ ಬಣ್ಣ ಇಂಥವ್ಯಾವ ವ್ಯತ್ಯಾಸಗಳನ್ನೂ ಗಮನಿಸದೆ ಚಿಕಿತ್ಸೆ ನೀಡಲಾಗುತ್ತಿದೆ.

o o o

ರಷ್ಯದೊಡನೆ ರಾಯಭಾರ ಬಾಂಧವ್ಯ ಹೊಂದಿರಲು ನೂತನ ಇರಾಕ್ ಗಣರಾಜ್ಯವು ನಿರ್ಧರಿಸಿದೆ. ಅದರಂತೆ ನೂತನ ಇರಾಕ್ ಗಣರಾಜ್ಯವು ಜನತಾ ಚೀಣಕ್ಕೆ ತನ್ನ ಮನ್ನಣೆಯನ್ನು ನೀಡಿದೆ. ಈ ಹಿಂದಿನ ಸರ್ಕಾರ ಕಮ್ಯೂನಿಸ್ಟ್ ರಾಷ್ಟ್ರಗಳೊಡನೆ ರಾಯಭಾರ ಬಾಂಧವ್ಯವನ್ನು ಹೊಂದಿರಲಿಲ್ಲ.

o o o

ರಾಜಸ್ಥಾನ ಸರ್ಕಾರವು ಒಂದು ತಿಂಗಳಲ್ಲಿ ಸಾಗುವಳಿಯಾಗಬಲ್ಲ ಭೂಮಿಯನ್ನು ತಮಗೆ ಒದಗಿಸಿಕೊಡದಿದ್ದರೆ ಜೋಧಪುರ್ ವಿಭಾಗದ ಸುಮಾರು ಒಂದು ಲಕ್ಷದಷ್ಟು ಭೂರಹಿತ ರೈತರು ದೊಡ್ಡದೊಂದು ಆಂದೋಳನವನ್ನೇ ನಡೆಸುವದಾಗಿ ಹೇಳಿದ್ದಾರೆ.

o o o

ಲೆಬನಾನ್‌ನಲ್ಲಿರುವ ಭಾರತೀಯ ಕುಟುಂಬಗಳು ಅಲ್ಲಿಂದ ಹೊರಹೊರಡುತ್ತಿದ್ದಾರೆ. ಭಾರತಕ್ಕೆ ಮರಳಿ ಬರುತ್ತಿರುವ ಈ ಜನರ ಮೊದಲನೇ ತಂಡದಲ್ಲಿ ೯ ಮಕ್ಕಳೂ ಮಿಸ್ ಶೀರ್ಲೆ ಮುಖ್ರಿ ಎಂಬ ಮಹಿಳೆಯೂ ಇದ್ದು ಜುಲೈ ೨೦ರಂದು ಬೊಂಬಾಯಿಗೆ ಆಗಮಿಸಿದರು. ವೀಸಾ ಸಿಕ್ಕುವುದು ತುಂಬಾ ಕಷ್ಟವಾಗಿದೆ ಎಂದು ಆಕೆ ಹೇಳಿದ್ದಾರೆ.

o o o

ಜೋರ್ಡಾನಿನ ದಿನದಿನದ ಖರ್ಚಿಗೆ ಅಮೇರಿಕೆಯು ತನ್ನ ಅಂದಾಜಿನಿಂದ 7,500,000 ಷಿಲ್ಲಿಂಗುಗಳನ್ನು ಕೊಡುತ್ತಿದೆ.

o o o

ಭಾರತ ಸರಕಾರವು ಇರಾಕಿನ ನೂತನ ಗಣರಾಜ್ಯಕ್ಕೆ ಮನ್ನಣೆ ನೀಡಿದೆ. ದೆಹಲಿಯಲ್ಲಿರುವ ಇರಾಕಿನ ರಾಯಭಾರಿ ಕಛೇರಿ ಮೇಲೆ ಹೊಸ ರಾಜ್ಯದ ಬಾವುಟ ಹಾರಾಡುತ್ತಿದೆ. ಭಾರತದಲ್ಲಿರುವ ಇರಾಕಿ ಜನರು ಹೊಸ ಇರಾಕ್ ಗಣರಾಜ್ಯವನ್ನು ಸ್ವಾಗತಿಸಿದ್ದಾರಲ್ಲದೆ ಭಾರತದ ನಿಲುವನ್ನೂ ಸ್ವಾಗತಿಸಿದ್ದಾರೆ, ಹೊಸ ರಾಜ್ಯಕ್ಕಿತ್ತ ಮನ್ನಣೆಯ ಬಗ್ಗೆ ಸಂಭ್ರಮಿತರಾಗಿದ್ದಾರೆ.

o o o

ನೀವೇನು ಹೇಳುತ್ತೀರಿ ?

ಇದು ನಮ್ಮ ಸರಕಾರದ ವ್ಯವಹಾರ

ಭಾರತ ಸರ್ಕಾರದ ರೈಲ್ವೆ ಸಚಿವ ಶಾಖೆಯು ತಾತಾರವರೊಂದಿಗೆ ವ್ಯವಹಾರ ಮಾಡಿಕೊಂಡು ರೈಲ್ವೆ ಎಂಜಿನುಗಳನ್ನು ಪಡೆಯುತ್ತಿದೆಯಷ್ಟೆ. ಈ ವ್ಯವಹಾರದಲ್ಲಿ ತಾತಾರವರಿಗೆ 'ಅತ್ಯಂತ ಉದಾರದ ಲಾಭ ಕೊಡಲಾಗಿದೆ' ಎಂಬ ಗಲಾಟೆಯಾಗಿ ಇದೀಗ ರೂ. 3,75,000ಗಳಿಗೆ ಒಂದು ಎಂಜಿನು ಎಂದು ತೀರ್ಮಾನಕ್ಕೆ ಬಂದಿದ್ದರೂ ಇದು ಕೂಡ ಅತ್ಯಂತ ಉದಾರದ ಲಾಭವನ್ನೇ ಒದಗಿಸಿ ಕೊಡುವದಾದುದರಿಂದ ಸರ್ಕಾರಕ್ಕೂ ತಾತಾಗಳಿಗೂ ಈ ವ್ಯವಹಾರ ಮಾತು ಕತೆಗಳು ಮತ್ತೆ ನಡೆದೇ ಇವೆ.

ಇಲ್ಲಿ ಗಮನಿಸಬೇಕಾದ ಸೋಜಿಗದ ಸಂಗತಿಗಳಿವೆ. ಈಗಿನ ರೂ. 3,75,000 ಗಳ ದೊಡ್ಡ ಅಂಕಿಯೇನು ಅಷ್ಟು ಚಕಿತಗೊಳಿಸುವುದಲ್ಲ. ಇಲ್ಲಿಯ ವರೆಗೆ ಭಾರತ ಸರ್ಕಾರ ತಾತಾಗಳಿಗೆ ತೆತ್ತ ಹಣ ಚಕಿತಗೊಳಿಸುವಷ್ಟಿದೆ.

ಜೂಲೈ 1954ರಿಂದ ಮಾರ್ಚ್ 1955ರ ವರೆಗೆ ರೈಲ್ವೆ ಬೋರ್ಡು ತಾತಾರವರಿಂದ ಒಂದು ಎಂಜಿನಿಗೆ ರೂಪಾಯಿ 6,90,105 ಗಳಂತೆ, 34 ಎಂಜಿನನುಗಳನ್ನು ಕೊಂಡಿದೆ. ಅಲ್ಲದೆ ಎಪ್ರಿಲ್ 1956ರಿಂದ ಮಾರ್ಚ್ 1958ರ ವರೆಗೆ ಒಂದು ಎಂಜಿನಿಗೆ 6,22,322 ರೂ.ಗಳಂತೆ ಇನ್ನೊಂದು ಬಗೆಯ 50 ಎಂಜಿನುಗಳನ್ನು ಕೊಂಡಿದೆ. ಇದೇ ಕಾಲಾವಧಿಯಲ್ಲಿ ಇವೆಲ್ಲಕ್ಕಿಂತ ಬೇರೆ ಬಗೆಯ 50 ಎಂಜಿನುಗಳನ್ನು ಒಂದಕ್ಕೆ ರೂಪಾಯಿ 5,11,000 ಬೆಲೆ ಕೊಟ್ಟುಕೊಳ್ಳಲಾಗಿದೆ.

ಹೀಗೆ 1954ರಿಂದ ತಾತಾಗಳು ಸುಮಾರು 214 ಮೀಟರ್‌ಗೇಜ್ ಎಂಜಿನುಗಳನ್ನು ರೈಲ್ವೆ ಬೋರ್ಡಿಗೆ ಕಟ್ಟಿದ್ದಾರೆ. ಈಗ ಹೇಳುತ್ತಿರುವ ಒಂದು ಎಂಜಿನಿನ ಬೆಲೆ ರೂ. 3,75,000ವನ್ನು ಇದರೊಂದಿಗೆ ತುಲನೆ ಮಾಡಿ ನೋಡಿ

ತಾತಾಗಳು ಇದರಲ್ಲಿ ಸಂಪಾದಿಸಿದ ಲಾಭವೆಷ್ಟು? ಅವರ ಕಂಪೆನಿಯ ಲೆಕ್ಕದಂತೆಯೇ ಒಂದು ಎಂಜಿನಿಗೆ ಸರಾಸರಿ ಒಂದು ಲಕ್ಷ ರೂಪಾಯಿ ಲಾಭ!

ಆದರೆ—

ಇದೇ ಬಗೆಯ ಮೀಟರ್‌ಗೇಜ್ ಎಂಜಿನುಗಳನ್ನು ರೈಲ್ವೆ ಬೋರ್ಡ್ ಜಪಾನಿನಿಂದ ಕೊಂಡುಕೊಂಡರೆ ಕಸ್ಟಂಡ್ಯೂಟಿ, ಸಾರಿಗೆಯ ವೆಚ್ಚ, ಇನ್ನಿತರ ಪ್ರಾಸಂಗಿಕ ಖರ್ಚುಗಳು ಎಲ್ಲಾ ಸೇರಿಕೊಂಡು ಒಂದು ಎಂಜಿನಿನ ಬೆಲೆ ರೂ. 3,01.667 ಆಗುತ್ತದೆ. ಚಿತ್ತರಂಜನ ಕಾರ್ಖಾನೆಯಲ್ಲಿ ಒಂದು ಬ್ರಾಡ್ ಗೇಜ್ ಇಂಜಿನ್ ರೂ. 4,75,000ಗಳಿಗೆ ದೊರೆಯುತ್ತದೆ.

ಇದಕ್ಕೇ ಅನ್ನುವುದು, ಭಾರತದ ಬಂಡವಾಳಿಗರು ಭಾರತದ ಬಂಡವಾಳಿಗರು ಭಾರತ ಸರಕಾರಕ್ಕೆ ಚೆನ್ನಾಗಿ ಟೋಪಿ ಹಾಕುತ್ತಿದ್ದಾರೆಂದಲ್ಲ, ಈ ಶೋಷಣೆ ಅಪರೋಕ್ಷವಾಗಿ ನಮ್ಮ ಮೇಲೆ ಸಾಮಾನ್ಯ ಪ್ರಜೆಯ ಮೇಲೆ ನಡೆದಿದೆ.

ನಿಜ ಸ್ಥಿತಿ

ಕೇರಳದಲ್ಲಿ ಸಣ್ಣಪುಟ್ಟ ಮುಷ್ಕರಗಳು ನಡೆಯುತ್ತಲೇ ಇವೆ. ಹೆಚ್ಚಾಗಿ ವಿದ್ಯಾರ್ಥಿಗಳು ಇವನ್ನು ನಡೆಸುತ್ತಿದ್ದಾರೆ. ತ್ರಿವೇಂದ್ರಮ್‌ನಲ್ಲಿ ಎರಡು ಕಾಲೇಜು ಹಾಗೂ ಸೆಕೆಂಡರೀ ಶಾಲೆಯ ವಿದ್ಯಾರ್ಥಿಗಳು ಆಲೆಪ್ಪಿಯಲ್ಲಿರುವ ಪೋಲೀಸ್ (ಬೆತ್ತದ ಏಟು) ಕ್ರಮವನ್ನು ಪ್ರತಿಭಟಿಸಿ ಮುಷ್ಕರ ನಡೆಸಿದರು. ಈ ಮುಷ್ಕರಕಾರರಲ್ಲಿ ಮಕ್ಕಳೇ ಹೆಚ್ಚು ಸರಕಾರದ ವಿರೋಧ ಘೋಷಣೆಗಳನ್ನು ಕೂಗುತ್ತಿದ್ದರಲ್ಲದೆ ಕಲ್ಲು ತೂರಾಟದಿಂದ ಸರಕಾರದ ಸಾರಿಗೆಯ ಹದಿಮೂರು ಮೋಟಾರುಗಳನ್ನು ಜಖಂಗೊಳಿಸಿದರು ಮತ್ತು ಸಚಿವರೊಬ್ಬರ ಕಾರುಗಳಿಗೂ ಕಲ್ಲು ತೂರಿದರು. ಆದರೆ ಪರಿಸ್ಥಿತಿ ವಿಕೋಪಕ್ಕೇನು ಹೋಗಲಿಲ್ಲ. ಸರಕಾರ ಸುಮ್ಮನೇ ಇತ್ತು.

ಇತ್ತೀಚೆಗೆ ರಚಿಸಲ್ಪಟ್ಟ ವಾಟರ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ನಿಗೆ ವಿರೋಧವಾಗಿ ಆಲೆಪ್ಪಿ ಮತ್ತು ಕುಟ್ಟನಾಡುಗಳಲ್ಲಿ ವಿದ್ಯಾರ್ಥಿ ಮುಷ್ಕರಗಳು ನಡೆದುವು. ಒಂದೇ ಆಣೆಯಲ್ಲಿ ಮೋಟಾರ್ ನೌಕೆಗಳಲ್ಲಿ ಬೇಕಾದಷ್ಟು ದೂರ ಸಂಚರಿಸಲು ವಿನಾಯಿತಿ ಕೊಡಬೇಕೆಂಬುದು ವಿದ್ಯಾರ್ಥಿಗಳ ಬೇಡಿಕೆಯಾಗಿತ್ತು. ಸರಕಾರವು ಶೇ. ೫೦ಷ್ಟು ವಿನಾಯಿತಿ ಕೊಡುವುದಾಗಿ ಹೇಳಿತು. ಹಿಂದಿನ ಖಾಸಗೀ ಮಾಲೀಕರುಗಳು ಒಂದಾಣೆಯ ವಿನಾಯಿತಿ ಕೊಟ್ಟದ್ದರಿಂದೂ ಈಗಲೂ ಅದೇ ಬೇಕೆಂದೂ ವಿದ್ಯಾರ್ಥಿಗಳು ಹಠ ತೊಟ್ಟರು. ಹಾಗಿದ್ದರೆ ಅದನ್ನೆಲ್ಲ ವಿಚಾರಿಸಿ ಕೊಡಲಾಗುವುದು ಎಂದು ಕಾರ್ಪೋರೇಷನ್ ತಿಳಿಸಿ ಕೊನೆಗೆ ವಿದ್ಯಾರ್ಥಿಗಳ ಮನವಿಗೆ ಮನ್ನಣೆ ನೀಡಿತು. ಇದಾದ ಮೇಲೆ ಇನ್ನೊಂದು ಬೇಡಿಕೆ ಬಂತು: "ರಷ್ಯನ್ ಮಾದರಿಯ ಪಠ್ಯ ಪುಸ್ತಕಗಳನ್ನು ವಾಪಸ್ ತೆಗೆದುಕೊಳ್ಳಿ". ಇದಕ್ಕಾಗಿಯೇ ಅಖಿಲ ಕೇರಳ ಕೆಥೋಲಿಕ್ ಕಾಂಗ್ರೆಸ್ಸು "ಪಠ್ಯ ಪುಸ್ತಕಗಳ ಪರಿಶೀಲನೆಗೆ" ಒಂದು ಉಪ ಸಮಿತಿಯನ್ನು ನಿಯಮಿಸಿದೆ !

ಆಲೆಪ್ಪಿಯಲ್ಲಿ ವಿದ್ಯಾರ್ಥಿಗಳು ಅನೇಕ ಮೋಟಾರ್ ಲಾಂಚ್‌ಗಳನ್ನು ಜಖಂಗೊಳಿಸಿದರು. ವಿದ್ಯಾರ್ಥಿಗಳನ್ನು ಚದುರಿಸಲು ಪೋಲಿಸರು ಬೆತ್ತಗಳನ್ನು ಪಯೋಗಿಸ ಬೇಕಾಯಿತು. ಸರಕಾರ ಇದರ ಬಗ್ಗೆ ಸ್ಪಷ್ಟೀಕರಣಕೊಡುತ್ತ "ಬಲಪ್ರಯೋಗ ಮಾಡುವ ಪರಿಸ್ಥಿತಿಯನ್ನು ಜನರ ಒಂದು ವಿಭಾಗವು ಪರಿಸ್ಥಿತಿಯನ್ನು ಹುಟ್ಟುಹಾಕುತ್ತಿರುವುದು ಶೋಚನೀಯ" ಎಂದು ನುಡಿದು ವಿದ್ಯಾರ್ಥಿಗಳಿಂದ ಯಾವ ವಿಶಿಷ್ಟ ಬೇಡಿಕೆಗಳೂ ಇಲ್ಲ, ಅಥವಾ ಅವರ ಹಕ್ಕು ಬಾಧ್ಯತೆಗಳ ರಕ್ಷಣೆಯ ಪ್ರಶ್ನೆಯೂ ಇಲ್ಲ. ಬರೀ ರಾಜಕೀಯ ಗಲಭೆಗಳನ್ನುಂಟುಮಾಡಿ ಸರಕಾರವನ್ನು ಆಹ್ವಾನಿಸುವ ಕಾರ್ಯ ನಡೆದಿದೆ" ಎಂದು ಹೇಳಿದೆ.

ಈ ಚಳವಳದಲ್ಲಿ ನಾಯಕತ್ವ ವಹಿಸಿದವರು ಆಲೆಪ್ಪಿ ಕ್ರಿಶ್ಚಿಯನ್ ಶಾಲೆಗಳ ವ್ಯವಸ್ಥಾಪಕ ವರ್ಗ ಮತ್ತು ಹಲವು ಉಪಾಧ್ಯಾಯರುಗಳು.

ಈ ಮಧ್ಯೆ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ "ವಿದ್ಯಾರ್ಥಿಗಳ ಬೇಡಿಕೆ"ಗಳಿಗೆ ಬೆಂಬಲ ನೀಡಿದ್ದಾರೆ!

ಇದು ಒಂದು ಮುಖವಾಯಿತು. ಆದರೆ ಒಂದೇ ಮುಖ ಯಾವ ಪ್ರಶ್ನೆಗೂ ಇರಲಾರದು. ಇಲ್ಲಿ ಪತ್ರಿಕೆಗಳ ತೀಕ್ಷ್ಣ ಪ್ರತಿಕ್ರಿಯೆ ಗಮನಾರ್ಹವಾಗಿದೆ:

ಮಾತೃಭೂಮಿ: (ಅತ್ಯಧಿಕ ಪ್ರಸಾರದ ಕಾಂಗ್ರೆಸ್ ಪರ ಪತ್ರಿಕೆ, ಕೋಝಿಕೋಡ್) ಎರಡು ಸಲ ಸಂಪಾದಕೀಯ ಬರೆದು ವಿದ್ಯಾರ್ಥಿಗಳ ಮುಷ್ಕರದ ಬಗ್ಗೆ ಅಸಮ್ಮತಿ ವ್ಯಕ್ತಪಡಿಸಿ, ವಿದ್ಯಾರ್ಥಿಗಳನ್ನು ರಾಜಕೀಯಕ್ಕೆಳೆದುದನ್ನು ಖಂಡಿಸಿದೆ. **"ವಿದ್ಯಾರ್ಥಿಗಳನ್ನು ಗಲಭೆಗಳ ಆಟದಲ್ಲಿ ತೊಡಗಿಸುವುದೆಂದರೆ ಹಳೆಯ ಹಿರಿಯರು ಸಂಪಾದಿಸಿದುದನ್ನು ಹಾಳುಮಾಡಲು ಹೊಸ ಪೀಳಿಗೆಯನ್ನು ಪೋಷಿಸಿದಂತೆ"** ಎಂದು (ಸದ್ಯದ ಪರಿಸ್ಥಿತಿಯನ್ನು ನೇರವಾಗಿ ಉದಹರಿಸದೆ) ತಿಳಿಸಿದೆ.

ದೇಶಬಂಧು: (ಕೊಟ್ಟಾಯಂನಿಂದ ಪ್ರಕಟವಾಗುವ ಸ್ವತಂತ್ರ ಪತ್ರಿಕೆ). ಹೀಗೆ ಬರೆದಿದೆ: **ಶುದ್ಧ ಸಮಾಜ ವಿರೋಧೀ ಕಾರ್ಯ**........ ಸಮಾಜ ವಿರೋಧಿ ಪ್ರವೃತ್ತಿಗಳೆಲ್ಲವನ್ನೂ ಕೃತಿಗಳನ್ನೂ ಬಲವಾಗಿ ತೊಡೆದುಹಾಕಿ ರಾಜ್ಯದಲ್ಲಿ ಶಾಂತಿ ವ್ಯವಸ್ಥೆಗಳನ್ನು ಕಾಪಾಡುವುದು ಪ್ರತಿಯೊಂದು ಸರ್ಕಾರದ ಪ್ರಾಥಮಿಕ ಕಾರ್ಯಗಳಲ್ಲೊಂದಾಗಿದೆ."

ಕೇರಳ ಕೌಮುದಿ: (ತ್ರಿವೇಂದ್ರಮ್ಮಿನ ಪ್ರಭಾವೀ ಪತ್ರಿಕೆ) ಹೇಳುತ್ತದೆ: ವಿದ್ಯಾರ್ಥಿಗಳ ಹೋರಾಟ **"ಸಂಪೂರ್ಣ ದುರ್ಬೋಧನೆಗೊಳಗಾದುದು ಮತ್ತು ಪೂರಾ ದುರ್ದೈವೀ ಸಂಗತಿಯಾಗಿದೆ.** ವಿದ್ಯಾರ್ಥಿಗಳನ್ನು ಅಡ್ಡದಾರಿಗೆಳೆದು ಅವರನ್ನೂ ದೇಶವನ್ನೂ ಹಾಳುಮಾಡುವ ಪಕ್ಷ

(೬ನೇ ಪುಟ ನೋಡಿ)

ಚುಟುಕ—ಚುರುಕು

ನರ

ಬಾಳ-ಹೋರಟೆ ಭಾರಹೊತ್ತ ವೀರ,
ಬಿಲ್ಲ-ನಾರಿಯ ಬಲ್ಮೆ ಮತ್ತೆ ಸಹಕಾರ
ಇರುವುದಾದರೆ ನಿನಗೆ
ಇರದಾವ ಹೆದರಿಕೆ;
ನೀನಪ್ಪೆ ಲೋಕೈಕ ವಿಜಯಿ, ಬಿಲ್ಗಾರ ನರ!

ಹಿಂಬರಿವ ಹುಂಬ

ಹಿಂದಣದರೆಡೆ ಕಣ್ಣು
ಮುಂದಣದರೆಡೆ ಬೆನ್ನು
ಹಿಂಬರಿವ
ಹುಂಬನಿವ
ಮುಕ್ಕದಿರನ್ನೈ ಮಣ್ಣು

—ಎಂ. ಅಕಬರ್ ಅಲಿ

ಉಪಗ್ರಹವನ್ನು

ವಿಶ್ವಾಕಾಶಯಾನವನ್ನು ಭೂಮಿಗೆ ವಾಪಸು ತರಿಸಿಕೊಳ್ಳುವುದು ಅತ್ಯಂತ ಜಟಿಲ ಸಮಸ್ಯೆಯಾಗಿದೆ. ವಿಶ್ವಾಕಾಶಯಾನದ ಆಕಾಶ ಬಾಣಗಳ ವೇಗವನ್ನು ತಗ್ಗಿಸಲು ವಿಜ್ಞಾನಿಗಳು ಈಗ ಎರಡು ಮಾರ್ಗಗಳನ್ನು ಕಾಣುತ್ತಿದ್ದಾರೆ: ಮೊದಲನೆಯದರಲ್ಲಿ ವಾತಾವರಣವನ್ನು ನಿರೋಧಕವಾಗಿ ಬಳಸಲಾಗುವುದು; ಎರಡನೆಯದರಲ್ಲಿ ಆಕ್ಶಾಶ ಬಾಣ "ಎಂಜಿನ್"ಗಳನ್ನು ಬಳಸಲಾಗುವುದು. ವಾಯು-ವಿಲಂಬ ಪ್ರತಿಕ್ರಿಯೆಯಲ್ಲಿ ಉಪಗ್ರಹವು ಆಕಾಶ ಬಾಣದ ರೂಪವನ್ನು ಪಡೆದಿರುವುದು. ಮುಂದಗತಿಯ ಕ್ರಮವು ಈ ಕೆಳಗಿನಂತಿರುವುದು: ವಾ

ಟೀಕೆ ಅನಗತ್ಯ

ಬೊಂಬಾಯಿಯ 'ಬ್ಲಿಟ್ಜ್' ಪತ್ರಿಕೆಯಿಂದ ಇದೊಂದು ಸುದ್ದಿ. ರಾಜಸ್ಥಾನದ ರಾಜ್ಯಪಾಲರಿಗಾಗಿ ಕೊಂಡ ವಸ್ತುಗಳು ಪಟ್ಟಿ ಹೀಗಿದೆ:

1. ಸಿನೆಮಾ ಪ್ರೊಜೆಕ್ಟರ್: ರೂ. 3,670.
2. ರೆಡಿಯೊಗ್ರಾಮ್ಸ್ ಮತ್ತು ರಿಕಾರ್ಡ್ಸ್: ರೂ. 2,750.
3. ಏಳು ರೆಡಿಯೋಗಳು ಮತ್ತು ಎರಡು ಫೋನಾಗ್ರಾಫ್‌ಗಳು: ರೂ. 3,219.
4. ಸ್ಟುಡ್‌ಬೇಕರ್ ಕಾರ್: ರೂ. 28,311.
5. ನ್ಯೂ ಹಿಂದುಸ್ತಾನ್ ಲ್ಯಾಂಡ್ ಮಾಸ್ಟರ್: ರೂ. 11,909.
6. ಡಾಡ್ಜ್ ಕಿಂಗ್ಸವೇ ಡಿಲಕ್ಸ್ ಕಾರ್: ರೂ. 18,838.
7. ವಿಲ್ಲೀಸ್ ಮಾಡೆಲ್ ಸ್ಟೇಷನ್ ವ್ಯಾಗನ್: ರೂ. 18,838.
8. ಎಂಟು ಏರ್‌ಕಂಡಿಷನರುಗಳು: ರೂ. 28,808.
9. ಉಪವನದ ಕೊಡೆಗಳು: ರೂ. 1,700.
10. ಕ್ಲೋಕ್ಸ್ ಮತ್ತು ಟೈಮ್ ಪೀಸ್‌ಗಳು: ರೂ. 2,100.
11. ತೂಗು ದೀಪಧಾರ, ಗೊಂಚಲು ದೀಪಗಳು: ರೂ. 3,500.
12. ತಿಂಡಿತೀರ್ಥದ (ಪಿಂಗಾಣಿ) ಸಾಮಾನುಗಳು ರೂ. 20,200
13. ಪರದೆಗಳು ರೂ. 26,000
14. ಬ್ಲ್ಯಾಂಕೆಟ್‌ಗಳು: ರೂ. 2,500
15. ಆಭರಣ ವಸ್ತುಗಳು: ರೂ. 3,000
16. ವಿದ್ಯುದ್ದೀಪಗಳು ಮತ್ತಿನ್ನಿತರ ವಿದ್ಯುತ್ ಸಲಕರಣೆಗಳು: ರೂ. 1,000
17. ಆಸನಾಲಂಕಾರಗಳು: ರೂ. 21,000
18. ಬೆಳ್ಳಿಯ ಹಾಗೂ ಇತರ ಒಡವೆಗಳು: ರೂ. 20,000

ಈ ಪಟ್ಟಿ ಅಪೂರ್ಣ ಹಾಗೂ ಇದರಲ್ಲಿಯ ಬೆಲೆಗಳಲ್ಲಿಯ ನಯೆ ಪೈಸೆಗಳನ್ನು ಬಿಟ್ಟು ಬಿಡಲಾಗಿದೆ.

ತಾವರಣದ
ವು ಪತನಹೊ
ತ್ತದೆ. ಆದ
ಯ ರೂಪದ
ಶ್ವಕ್ಕೆ ಕುಪ್ಪಳಿ
ನ ಸಮತಲ
ಲಾದ ಕಲ್ಲು,
ಪುಟಿದೆದ್ದು
ವೂ ಪುಟಿಯು
ಗ್ರಹವು ಪು
ಕೊಂಡು ವ
ಆಗ ಅದು
ಸ್ವಲ್ಪ ಹೆಚ್ಚು
ಳಿಯುವುದು;
ತಗ್ಗುವುದು,
ಅನೇಕಸಲ ಪು
ವೇಗವನ್ನು ಗ
ಗ್ರಹವು ಕಳೆದ
ಮಶಃ ಪತನ
ಳಿಸಲಾಗಿ
ದಲೂ ಮತ್ತು
ದಲೂ ಸಜ್ಜು
ಕಾದಷ್ಟು ವ
ತ್ತದೆ.

ಮುಂದಗತಿ
ಯ ವಿಧಾನದ
ಟದಲ್ಲಿ, ಉ
ಯಲ್ಲಿ ಸ್ವಯಂ
ವ ಆಕಾಶ ಬಾ
ಕಾಗುತ್ತದೆ.
ವೇಗವು ಕ್ರಮ
ಬಾಣದ 'ಎ
ಯಿಸುವುದರ
ನಿಯಂತ್ರಿಸಲ
ಗಳಲ್ಲಿ ಹೇಳ
ಉಪಗ್ರಹದ
ಧವಾಗಿರುವು

ಪರಮ

ಉಪಗ್ರಹ
ವುದಕ್ಕೆ ಇಳಿ
ಸೂಕ್ಷ್ಮ ನಿಣ
ರುತ್ತದೆ.
ಧುನಿಕ 'ರಾ
ಕೆಂದು ಯೊ
ಚಲಿತ ನಿಯ
ಳಿತವೂ ಮ
ವುದು. ಪ
ಕೊಂಡ ಈ
ಲಿಳಿಯಲು
ಇಂಧನದಿಂದ
ಎಂಜಿನ್ನುಗಳ
ದು ಅವಶ್ಯಕ
ಸಲುವಾಗಿ
ತ್ ವಿಕಿರಣ
ಷಪೂರಿತವಾ

ಮೊದಲನ
ರೋಧಕ ವ
ದ ದೃಷ್ಟಿಯ
ಪೈಕಿ ಹೆಚ್ಚು
ಈ ಸಂದರ್ಭ
ಕ್ಯಾಚಾರ ವ
ಬಾ ಕಷ್ಟಸಾ

ಎರಡನೆ
ಚ್ಚು ಗಹನ
ದಲ್ಲಿ ಇಳಿತ
ಕ್ಕಾಗಿ ನಿಣ

ೊಳಕ್ಕೆ ಉಪಗ್ರಹ
ಅದರ ವೇಗವು ತಗ್ಗು
ವಾಯುಗತಿ ಶಾಸ್ತ್ರೀ
ಅದು ಸುವ್ಯವಸ್ಥಿತ ವಿ
ನಿರುಗುವುದು, ನೀರಿ
ಾಂತರದಲ್ಲಿ ಎಸೆಯ
ಮುಟ್ಟಿದೊಡನೆಯೇ
ರಂತೆಯೇ, ಉಪಗ್ರ
ತರುವಾಯ ಉಪ
ವೇಗವನ್ನು ಕಳೆದು
ನ್ನು ಸ್ಪರ್ಶಿವುದು,
ಯ ಸಲಕ್ಕಿಂತಲೂ
ಾತಾವರಣದೊಳಕ್ಕೆ
ಗವು ಇನ್ನೂ ಹೆಚ್ಚು
ಪ್ರತಿಕ್ರಿಯೆಯನ್ನು
ನ ಮಾಡುತ್ತಾ, ತನ್ನ
ಪ್ರಮಾಣದಲ್ಲಿ ಉಪ
ದು. ಪುನಃ ಅದು ಕ್ರ
ವಿಶೇಷತಃ ಅನುಗೊ
ಟ್ಟಿರುವ ರೆಕ್ಕೆಗಳಿಂ
ಮಾನ—ಫಲಕಗಳಿಂ
ದ್ದು, ಅದಕ್ಕೆ ಬೇ
ನನ್ನೂ ಹೊಂದಿರು

ಮಾಡುವ ಎರಡನೆ
ಹವು ತನ್ನ ಹಾರಾ
ಅನುಕ್ಕಿದಿರಾದ ದಿಶೆ
ವನ್ನು ಹೊಂದಿರು
ವನ್ನು ಹೊಂದಿರಬೇ
ದಲ್ಲಿ ಉಪಗ್ರಹದ
ರುವುದು. ಆಕಾಶ
ತ್ರದವನ್ನು ಬದಲಾ
ಗತಿನಿರೋಧವನ್ನು
. ಬೇರೆ ಮಾತು
ಈ ಸಂದರ್ಭದಲ್ಲಿ
ರ ಏರಿಕೆಗೆ ವಿರೋ

...ಮಿಗೆ ವಾಪಸು ತರುವದೆಂತು

ಮೊದಲನೆಯ 'ಸ್ಪುಟ್ನಿಕ್'ಗಳನ್ನು ಹಾರಿಸಿದುದರಲ್ಲಿ ಇದಿರಾದ ಅತ್ಯಂತ ಮಹತ್ವಪೂರ್ಣ ಸಮಸ್ಯೆಗಳಲ್ಲಿ, ವೈಜ್ಞಾನಿಕ ಸಮೀಕ್ಷೆಗಳನ್ನು ಭೂಮಿಗೆ ವಾಪಸು ತರಿಸಿಕೊಂಡು ಉಳಿಸಿದುವುದೂ ಕೂಡ ಒಂದು ಸಮಸ್ಯೆಯಾಗಿದೆ.

ಉಪಗ್ರಹವು ತನ್ನೆಲ್ಲ ಉಪಕರಣಗಳೊಂದಿಗೆ ಉಲ್ಕೆಯಂತೆ ಸುಟ್ಟುಹೋಗುವುದು—ವಿಶೇಷ ವೇಗದಲ್ಲಿ ವಾತಾವರಣದ ಸಾಂದ್ರಸ್ತರಗಳಲ್ಲಿ ನುಗ್ಗಿಬರುವಾಗ ಈ ವಿಷಯ ತಿಳಿದದ್ದೇ ಆಗಿದೆ. ಆದರೆ, ಉಪಗ್ರಹವನ್ನು ಭೂಮಿಗೆ ವಾಪಸು ತರುವುದು, ಅಥವ ಕನಿಷ್ಠಪಕ್ಷದಲ್ಲಿ ಅದರ ಯಂತ್ರೋಪಕರಣಗಳನ್ನಾಗಲೀ, ಅಥವ ಬಾನುಲಿಯ ಮುಖಾಂತರ ಭೂಮಿಗೆ ಸಮಾಚಾರವನ್ನು ಪ್ರೇಷಿಸಲು ಸಾಧ್ಯವಾಗದಿರುವಂತಹ ಉಪಕರಣಗಳ ಭಾಗವನ್ನಾದರೂ ಭೂಮಿಗೆ ವಾಪಸು ಪಡೆಯುವುದು ಅತ್ಯಂತ

ಸೋವಿಯೆತ್ ಸ್ಪುತ್ನಿಕ್ ಕತೆ — ೪

ಅಪೇಕ್ಷಣೀಯವಾಗಿದೆ. ಉದಾಹರಣೆಗೆ ಹೇಳುವುದಾದರೆ, ಸೂರ್ಯನ ವರ್ಣಪಟಲದ ನೀಲಲೋಹಿತಾತೀತ ಮತ್ತು 'ಎಕ್ಸ್'—ಕಿರಣ ಶ್ರೇಣಿಗಳು ವಾತಾವರಣದಲ್ಲಿ 'ಓಜೋನ್' ಅನಿಲದಿಂದ ಪೂರ್ತಿಯಾಗಿ ಪ್ರತ್ಯೇಕಿಸಲ್ಪಟ್ಟವೆ; ಅವುಗಳನ್ನು ಭೂಮಿಯ ಮೇಲೆ ಕಾಣಲು ಸಾಧ್ಯವಿಲ್ಲ. ಇವುಗಳ ಸಮೀಕ್ಷೆಗಳೂ, 'ಸ್ಪುತ್ನಿಕ್ಕ'ನ ಔನ್ನತ್ಯಗಳಲ್ಲಿ ವಾತಾವರಣಗಳ ಬೇರೆ ಬೇರೆ ನಮೂನೆಗಳೂ, ಇತ್ಯಾದಿಗಳು, ಇಂತಹ ಆವಶ್ಯಕ ಸಮಾಚಾರಗಳಾಗಿವೆ.

'ಪ್ರೋಟೋನ್' (ಧನವಿದ್ಯುತ್ತಿನ ಏಕಮಾನ) ಮಾಪಕಗಳ ಸಹಾಯದಿಂದ ವರ್ಣಪಟಲದ ಹ್ರಸ್ವ-ತರಂಗ ಶ್ರೇಣಿಯ ಬಗ್ಗೆ ಪಡೆಯಲಾದ ಹಲವು ಆಧಾರಾಂಶಗಳನ್ನು ಬಾನುಲಿಯ ಮುಖಾಂತರ ಭೂಮಿಗೆ ಪ್ರೇಷಿಸಲಾಗುತ್ತದೆ. ಆದರೂ ಕೂಡ, ವರ್ಣಪಟಲ ಛಾಯಾಗ್ರಾಹಕದ ಸಹಾಯದಿಂದ, ಹೆಚ್ಚು ಪರಿಪೂರ್ಣವಾದ ಮತ್ತು ಅಮೂಲ್ಯವಾದ ಸಮಾಚಾರವನ್ನು ಪಡೆಯಬಹುದು, ಸೌರವರ್ಣಪಟಲವನ್ನು ಚಲಚ್ಚಿತ್ರಪಟಲದ ಮೇಲೆ ಛಾಯಾಚಿತ್ರಗ್ರಹಣ ಮಾಡಿಕೊಳ್ಳಲಾಗುವುದು.

ವಿಶಿಷ್ಟ 'ಫೋಟೋ' ಫಲಕಗಳ ಸಹಾಯ

ಉನ್ನತ ಶಕ್ತಿಗಳ ಬೀಜಾಣು ಅಂತಕ್ರ್ರಿಯೆಯ ಮೂಲಕ ಕಣಗಳ ರೂಪುಗೊಳ್ಳುವಿಕೆಯ ಮತ್ತು ಛಿನ್ನಛಿನ್ನೀಕರಣದ ಪ್ರತಿಕ್ರಿಯೆಗಳ ಕುರಿತು ಹೆಚ್ಚು ವಿವರ ಪೂರ್ಣ ಸಮಾಚಾರವನ್ನು,—ವಿಶೇಷ ರೀತಿಯಲ್ಲಿ ತಯಾರಿಸಲಾದ 'ಫೋಟೋ' ಜಿಡ್ಡನ್ನು (ಎಮಲ್ಷನ್) ದಪ್ಪವಾಗಿ ಬಳಿಯಲ್ಪಟ್ಟಿರುವ 'ಫೋಟೋ' ಫಲಕಗಳ ಸಹಾಯದಿಂದ ನಡೆಸಲಾಗುವ ವಿಶ್ವಕಿರಣಗಳ ಪರಿಶೀಲನೆಯಿಂದ ಪಡೆಯಲು ಸಾಧ್ಯವಿದೆ. ವಿಶ್ವಕಿರಣಗಳ ಪರಿಶೀಲನೆಯನ್ನು ನಡೆಸುವುದಕ್ಕಾಗಿ, ಸ್ವಲ್ಪ ಕಾಲದ ವರೆಗೆ (ಹದಿನೈದು ದಿನಗಳಿಗಿಂತಲೂ ಹೆಚ್ಚು ಕಾಲವಲ್ಲ) ನಮಗೆ ಇಷ್ಟವಿರುವಂತಹ ಔನ್ನತ್ಯದಲ್ಲಿ ದಪ್ಪವಾದ ಫಲಕಗಳ ಕಟ್ಟೊಂದನ್ನಿಡಬೇಕಾಗುತ್ತದೆ.

ಛಾಯಾಚಿತ್ರ ಸಮೀಕ್ಷೆಗಳಿಗಾಗಿ ಯಂತ್ರಸಮುಚ್ಚಯನ್ನು ಬಹುಕಾಲದ ವರೆಗೆ ಗ್ರಹಪಥದ ಮೇಲಿಡಬೇಕಾಗಿಲ್ಲವೆಂಬ ಅಂಶವನ್ನು ಲೆಕ್ಕಕ್ಕೆ ತೆಗೆದುಕೊಂಡು, ವಿಜ್ಞಾನಿಗಳು ಒಂದು ವಿಶಿಷ್ಟ ಯಂತ್ರವನ್ನು ಸೂಚಿಸಿದ್ದಾರೆ. ಅದು ಛಾಯಾಚಿತ್ರವನ್ನು ತೆಗೆದುಕೊಂಡಿರುವ ಪಟಲವನ್ನೊಳಗೊಂಡಿರುವ ಸಣ್ಣ 'ತೋಟಾ' (ಕಾರ್ಟ್ರಿಡ್ಜ್) ಒಂದನ್ನು ಭೂಮಿಗೆ ವಾಪಸು ಕಳಿಸುವುದು. ಮೂರನೆಯ ಘಟ್ಟದ ವಾಹಕ 'ರಾಕೆಟ್ಟ'ನಲ್ಲಿ ಆಕಾಶ ಬಾಣದಲ್ಲಿ) ಜೋಡಿಸಿಡಲಾಗಿರುವ, ವೇಗವನ್ನು ಮಂದಗೊಳಿಸುವ, ಆಕಾಶಬಾಣಕ್ಕೆ ಈ ಯಂತ್ರಸಾಧನವನ್ನು ಜೋಡಿಸಲಾಗುವುದು.

ಸಮೀಕ್ಷೆಗಳ ಪರಿಣಾಮಗಳನ್ನು ಉಳಿಸುವ ಸಾಧ್ಯತೆಯನ್ನುಂಟುಮಾಡುವ ಇಂತಹ ಯಂತ್ರಸಮುಚ್ಚಯವು ಬಾನುಲಿ ಯಂತ್ರ, ಪಟಲಪಾತ್ರ ಮತ್ತು ತೋಟಾ, ಇವುಗಳ ಜತೆಗೆ, ತುಕ್ಕು ಹಿಡಿಯದ (ಸ್ಟೆಯಿನ್‌ಲೆಸ್) ಉಕ್ಕಿನ, ಮಡಿಸಲಾದ, ಆಕಾಶ ಬುಟ್ಟಿಯನ್ನು (ಅದನ್ನು ಗಾಳಿಕೊಡೆಯಾಗಿ ಉಪಯೋಗಿಸುವುದಕ್ಕಾಗಿ), ವಾಹಕ ಆಕಾಶ ಬಾಣದಿಂದ ಆಕಾಶ ಬುಟ್ಟಿಯೂ ಮತ್ತು ಗತಿನಿರೋಧಕ ಆಕಾಶ ಬಾಣವೂ ಪ್ರತ್ಯೇಕಿಸಲ್ಪಟ್ಟ ಮೇಲೆ ಈ ಆಕಾಶ ಬುಟ್ಟಿಯಲ್ಲಿ ತುಂಬಿಸುವುದಕ್ಕಾಗಿ ಅನಿಲವನ್ನೂ ಕೂಡ ಹೊಂದಿರುತ್ತದೆ.

ಗ್ರಹಪಥದಲ್ಲಿ ಸುತ್ತುತ್ತಿರುವ ಉಪಗ್ರಹದಲ್ಲಿ ಜೋಡಿಸಲಾಗಿರುವ ಬಾನುಲಿ ಪ್ರೇಷಕ ಯಂತ್ರವು ಅಂತರಿಕ್ಷದಲ್ಲಿ ಉಪಗ್ರಹದ ಹಾರಿಕೆಯ ಸ್ಥಾನನಿರ್ದೇಶವನ್ನು ಭೂಮಿಗೆ ತಿಳಿಸುತ್ತದೆ. ಆ ಮೇಲೆ ಭೂಮಿಯಿಂದ ಉಪಗ್ರಹಕ್ಕೆ ಬರುವ ಸಂಕೇತದ ಪ್ರಕಾರ ಬೆಳಕಿಗೊಡ್ಡಿ ಛಾಯಾ ಚಿತ್ರಗ್ರಹಣ ಮಾಡಿರುವ ಪಟಲವನ್ನು 'ತೋಟಾ' ಕೊಳವೆಯೊಳಕ್ಕೆ ಸೆಳೆದುಕೊಳ್ಳಲಾಗುತ್ತದೆ. ತೋಟಾ ಸೂಕ್ಷ್ಮ ಬಾನುಲಿ ಕೇಂದ್ರಗಳನ್ನೊಳಗೊಂಡಿರುವ, ಮಡಿಸಲಾದ ಆಕಾಶ ಬುಟ್ಟಿಯು, ಗತಿನಿರೋಧಕ ಆಕಾಶ ಬಾಣದೊಂದಿಗೆ, ಮೂರನೆಯ ಘಟ್ಟದ ವಾಹಕ ಆಕಾಶ ಬಾಣದಿಂದ ಪ್ರತ್ಯೇಕವಾಗುತ್ತದೆ. ಭೂಮಿಯಿಂದ ಅದಕ್ಕೆ ಸಂಬಂಧಿಸಿದ ಸಂಕೇತವು ದೊರೆತೊಡನೆಯೇ ಈ ಆಕಾಶ ಬಾಣವು ಕಾರ್ಯಾರಂಭ ಮಾಡತೊಡಗುತ್ತದೆ, ಎಂದರೆ ಹೊರದೂಡಲಾದ ಯಂತ್ರಸಮುಚ್ಚಯದ ಹಾರಾಟದ ವೇಗವನ್ನು ನಿಷ್ಪರಿಣಾಮಗೊಳಿಸುತ್ತದೆ.

(ಕೊನೇ ಪುಟ ನೋಡಿ)

ಂಜೆನ್ನಿನ'

ುಗೆ ವಾಪಸು ತರು
ುವ ದೂರದ ಅತಿ
ಂತ ಮಹತ್ವದ್ದಾಗಿ
ಸಲುವಾಗಿ ಅತ್ಯಾ
ಗಳನ್ನು ಬಳಸಬೇ
ಾಗಿದೆ. ಸ್ವಯಂ
ಯ ಮೂಲಕ ಇ
ತ್ರವೂ ನಡೆಯು
ಜೆನ್ನ'ನ್ನು ಬಳಸಿ
ಭೂಮಿಯ ಮೇ
ದಲ್ಲಿ ಸಾಧಾರಣ
ಾಯಕ 'ಬೆಟ್'
ೊಂದಿರಬೇಕಾದು
ಕ್ಷದಲ್ಲಿ, ಇಳಿತದ
ಸ್ಥಾನವು ವಿದ್ಯು
ಪನ್ನು ನಿಂದ ವಿ
—ವಾಯು ಶಿ
ಾಂತ್ರಿಕ ಸಾಫಲ್ಯ
ಕ್ಷದಲ್ಲಿ, ಎರಡರ
ಾಗಿದೆ. ಆದರೆ,
ಸ್ಥಾನವನ್ನು ಲೆ
ಿಳಿಸುವುದು ತುಂ
ಾಂತ್ರಿಕವಾಗಿ ಹೆ
ಆದರೆ ಈ ಸಂದರ್ಭ
ಹೆಚ್ಚು ಕಳಾರುವಾ
ಿವಿದೆ.

ಸೋವಿಯತ್ ಮತ್ತು ಅಮೇರಿಕ್ ಭೂ ಉಪಗ್ರಹಗಳು

ಸೋವಿಯೆತ್		ಹಾರಿಸಿದ್ದೆಂದು?	ಉಪಗ್ರಹಗಳ ಭಾರ		
ಸ್ಪುಟ್ನಿಕ್	೧	೪-೧೦-೧೯೫೭	೮೩·೬	ಕಿ.ಗ್ರಾಂ	ಮೂರೂ ಉಪಗ್ರಹಗಳ ಒಟ್ಟು ತೂಕ ೧,೯೧೮ ೯ ಕಿ.ಗ್ರಾ.
,,	೨	೩-೧೧-೧೯೫೭	೫೦೮·೩	,,	
,,	೩	೧೫-೫-೧೯೫೮	೧·೩೨೭	,,	
ಅಮೇರಿಕನ್					ಮೂರು ಅಮೇರಿಕ ಉ.ಗ್ರಹಗಳ ಒಟ್ಟು ತೂಕ ೨೦ ೫ ಕಿ. ಗ್ರಾಂ *ವಾಹಕ ಆ. ಬಾಣದ ತೂಕ ಸೇರಿ
ಉಪಗ್ರಹ	೧	೩೧-೧-೧೯೫೮	೧೪*	,,	
,,	೨	೧೭-೩-೧೯೫೮	೧೫	,,	
,,	೩	೨೬-೩-೧೯೫೮	೧೪*	,,	

ಪ್ರಜಾಪ್ರಭುತ್ವದ ಮುನ್ನಡೆಯಲ್ಲಿ ಕೇರಳ

ರಿಸರ್ವ್ ಬ್ಯಾಂಕ್‌ನ ಒಂದು ಪ್ರಕಟನೆಯ ಪ್ರಕಾರ, ಕಳೆದ ವರ್ಷ ಕೇರಳ ಸರಕಾರದ ಆಡಳಿತ ವೆಚ್ಚವು ಆದಾಯದ ಶೇ. 14·6. ಇತರ ರಾಜ್ಯಗಳೊಂದಿಗೆ ಹೋಲಿಸಿ ನೋಡಿದರೆ ಆಡಳಿತೆಯ ಬಗ್ಗೆ ಅತೀ ಕಡಿಮೆ ಹಣ ವೆಚ್ಚವಾಗುವ ರಾಜ್ಯ ಕೇರಳ. ವಿವರ ಹೀಗಿವೆ:

ರಾಜ್ಯ		ಆಡಳಿತ ವೆಚ್ಚ, ಆದಾಯ ಶೇ.
ಕೇರಳ	....	14 6
ಮೈಸೂರು	....	19·5
ಆಂಧ್ರ	....	21·1
ಅಸ್ಸಾಂ	......	22·8
ಬಿಹಾರ್	....	24·4
ಬಾಂಬೆ	....	21
ಮಧ್ಯಪ್ರದೇಶ	....	20·2
ಮದ್ರಾಸು	....	20·3
ಒರಿಸ್ಸ	....	20
ಪಂಜಾಬ್	....	20·5
ರಾಜಸ್ಥಾನ್	......	23
ಯು. ಪಿ.	....	21·5
ಪ. ಬಂಗಾಳ	....	21

ರಿಸರ್ವ್ ಬ್ಯಾಂಕ್‌ನ ಮತ್ತೊಂದು ಪ್ರಕಟಣೆಯ ಪ್ರಕಾರ, ದೇಶದ ವಿವಿಧ ರಾಜ್ಯಗಳು ಸಾರ್ವಜನಿಕರಿಂದ ಇತ್ತೀಚೆಗೆ ಸಾಲ ಎತ್ತಿರುವುದರಲ್ಲಿ ಕೇರಳ ಸರಕಾರದ ಸಾಲ ಬೇಡಿಕೆಯ ಪೂರೈಕೆಯು ಪ್ರಥಮ ಸ್ಥಾನ ಪಡೆದಿದೆ. ಮದ್ರಾಸು, ಒರಿಸ್ಸ ಮುಂತಾದುವುಗಳಿಗೆ ಎರಡನೆಯ ಸ್ಥಾನ ದೊರೆತಿದೆ. ಕೇರಳ ಸರಕಾರ ೩೦೦ ಲಕ್ಷದ ಬೇಡಿಕೆಗೆ ೪೧೦ ಲಕ್ಷ ರೂ. ದೊರಕಿದೆ.

ಔದ್ಯೋಗಿಕ ಸಂಬಂಧಗಳ ಕಾನೂನು

ಕೇರಳ ಸರಕಾರವು ಔದ್ಯೋಗಿಕ ಸಂಬಂಧಗಳ ಕಾನೂನು ಒಂದರ ಬಗ್ಗೆ ಯೋಜಿಸುತ್ತಿದೆ.

ಕಾನೂನಿನ ಮುಖ್ಯ ಲಕ್ಷಣಗಳಲ್ಲಿ 'ರಾಜ್ಯದಲ್ಲಿ ಕನಿಷ್ಠ ಸಂಬಳದ ಮಟ್ಟ' ಒಂದಾಗಿದ್ದು ಔದ್ಯೋಗಿಕ ರಂಗಗಳಲ್ಲಿ ತಲೆದೋರುವ ಗುಂಪು ಗೊಂದಲಗಳನ್ನು ತೊಡೆದು ಹಾಕುವಲ್ಲಿ ನೆರವಾಗುವುದೂ ಒಂದಾಗಿದೆ. ಈ ಮಸೂದೆಯು ಕಾರ್ಮಿಕರ ಮತ್ತು ಮಾಲಿಕರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಸ್ಪಷ್ಟಪಡಿಸುವದಲ್ಲದೆ ಈ ಸಂಬಂಧದಲ್ಲಿಯ ವರ್ತನಿಕೆಗಳು, ತೊಂದರೆಗಳು ಇವುಗಳ ಬಗ್ಗೆಯೂ ಕ್ರಮಬದ್ಧ ನೀತಿಯನ್ನು ತೋರಿಸುವದಾಗಿದೆ. ಗ್ರಾಚ್ಯುಯಿಟಿ, ಕೆಲಸದಿಂದ ವಜಾ, ಬೋನಸ್ ಮುಂತಾದ ವಿಷಯಗಳೂ ಇದರಲ್ಲಿ ಅಡಕವಾಗುವುವು.

ಆಡಳಿತದ ವಿಕೇಂದ್ರಿಕರಣ

ಕೇರಳ ಸರ್ಕಾರವು ನಿಯಮಿಸಿದ್ದ ಆಡಳಿತ ಸುಧಾರಣಾ ಸಮಿತಿಯು ತನ್ನ ವರದಿಯನ್ನು ಸಿದ್ಧಪಡಿಸಿದೆ. ಈ ವರದಿಯಲ್ಲಿ ಅತ್ಯಂತ ಆಸಕ್ತಿಕರವಾದ ವಿಷಯವೆಂದರೆ ಆಡಳಿತದ ವಿಕೇಂದ್ರೀಕರಣ ಗ್ರಾಮಪಂಚಾಯ್ತಿಗಳ ಮಟ್ಟದಲ್ಲಿಂದಲೇ ಆರಂಭವಾಗುವದಾಗಿದೆ. ಗ್ರಾಮಪಂಚಾಯತುಗಳನ್ನೇ ಮೂಲಭೂತ ಪ್ರಮುಖ ಘಟಕಗಳನ್ನಾಗಿಸುವ ಈ ಕ್ರಮದಲ್ಲಿ ಸಾರ್ವಜನಿ

ಕರು ಆಡಳಿತದಲ್ಲಿ ಭಾಗಿಗಳಾಗಿರುವ ಪ್ರಜ್ಞೆ ಮೂಡಲೆಂಬ ಉದ್ದೇಶವಿದ್ದು ರಾಜ್ಯದಲ್ಲಿಯ ಶೈಕ್ಷಣಿಕ ಮಟ್ಟ ಉತ್ತಮ ತರದ್ದಾಗಿರುವದರಿಂದ ಈ ಪ್ರಯೋಗ ಯಶಸ್ವಿಯಾಗುವುದೂ ಸಾಧ್ಯವಿದೆ.

ಇವರಿಗೂ ಹೆಚ್ಚಿನ ಸಂಬಳ

ಕೇರಳ ಸರಕಾರವು ಇತ್ತೀಚೆಗೆ ಆಜ್ಞೆಯೊಂದನ್ನು ಹೊರಡಿಸಿ ರಾಜ್ಯದ ಟ್ರಾನ್ಸ್‌ಪೋರ್ಟ್ ಶಾಖೆಯ ಕೆಲಸಗಾರರ ಸಂಬಳದಲ್ಲಿಯ ಹೆಚ್ಚಳವನ್ನು ತಿಳುಹಿಸಿದೆ. ಈ ಶಾಖೆಯಲ್ಲಿ ಒಟ್ಟು 5,000 ಜನ ಕೆಲಸಗಾರರಿರುವರು.

ಹೊಸ ವೇತನ ಪ್ರಮಾಣದ ಪ್ರಕಾರ ಅತ್ಯಂತ ಕೆಳದರ್ಜೆಯ ಅಟೆಂಡರರೊಬ್ಬನಿಗೆ ರೂ. 30—60ರ ವರೆಗೆ ಸಂಬಳ ದೊರಕುತ್ತದೆ. ಈಗ ಅವರಿಗೆ ದೊರಕುವ ಪ್ರಮಾಣ 25ರಿಂದ 30ರ ವರೆಗೆ ಮಾತ್ರ ಇದೆ. ಡ್ರೈವರನಿಗೆ ದೊರಕುತ್ತಿರುವ ಸಂಬಳ ರೂ. 50ರಿಂದ 120ರ ವರೆಗಿತ್ತು. ಹೊಸ ಪ್ರಮಾಣದಂತೆ ರೂ. 50ರಿಂದ ರೂ. 130ರ ವರೆಗೆ ದೊರೆಯುತ್ತದೆ. ಕಂಡಕ್ಟರುಗಳು ಈಗಿನ ರೂ. 40—100 ಬದಲು ರೂ. 120 ಪಡೆಯುತ್ತಾರೆ.

ಭೂವಿತರಣೆ ಆರಂಭ

ಕೇರಳ ಸರ್ಕಾರವು ಪ್ರಪ್ರಥಮವಾಗಿ ಭೂವಿತರಣೆಯ ಕಾರ್ಯದಲ್ಲಿ ತೊಡಗಲಿದೆ.

ಕೂಥಾಲಿಯಲ್ಲಿರುವ ಸರಕಾರದ 1,435 ಎಕ್ರೆ ಜಮೀನನ್ನು ಭೂಹೀನ ಹಾಗೂ ಅರ್ಹ ರೈತರಲ್ಲಿ ಹಂಚುವಂತೆ ತಾಲೂಕು ಭೂವಿತರಣಾ ಸಮಿತಿಗೆ ಆಜ್ಞೆ ಇತ್ತಿರುವುದಾಗಿ ತಿಳಿದಿದೆ.

ಕಳೆದ ಅನೇಕ ದಿನಗಳಿಂದ ರೈತರು ಕಿಸಾನ್ ಸಂಘದ ನಾಯಕತ್ವದಲ್ಲಿ ಭೂವಿತರಣೆಯಾಗಬೇಕೆಂದು ಕೇಳಿಕೊಳ್ಳುತ್ತಲೇ ಬಂದಿದ್ದರು. ಕಮ್ಯೂನಿಸ್ಟ್ ಮಂತ್ರಿಮಂಡಲಳ ಅಧಿಕಾರಕ್ಕೆ ಬಂದ ಕೂಡಲೇ ಅವರ ಆಶೆ ಕೈಗೂಡುತ್ತಿದೆ.

ಉತ್ತರ ಮಲಬಾರ್‌ನಲ್ಲಿರುವ ಕೂಥಾಲಿ ಎಸ್ಟೇಟಿನ ಒಂದು ಭಾಗವಾಗಿರುವ ಈ ಭೂಮಿ ಮದರಾಸ್ ಸರ್ಕಾರದ ವಶದಲ್ಲಿತ್ತು.

ಹೋಮಿಯೋಪೆಥಿಕ್ ಕಾಲೇಜ್ ಸ್ಥಾಪನೆ

"ಕೇರಳ ಸರ್ಕಾರದ ಈ ಪ್ರಯತ್ನ ಪ್ರಶಂಸನೀಯ. ಪ್ರತಿಯೊಂದು ರಾಜ್ಯವೂ ಹೋಮಿಯೋಪೆಥಿಕ್ ಕಾಲೇಜನ್ನು ಹೊಂದಿರುವುದು ಅಗತ್ಯವಾಗಿದೆ. ಭಾರತದ ಬಡಜನತೆಯ ಅಗತ್ಯಕ್ಕೆ ಹೊಂದಿಕೊಳ್ಳುವ ಔಷಧಿ ಹೋಮಿಯೋಪೆಥಿಕ್ ಆಗಿದೆ. ಸರ್ಕಾರಗಳು ಇದಕ್ಕೆ ಪ್ರೋತ್ಸಾಹ ನೀಡಲೇ ಬೇಕು."

ಎಂಬುದಾಗಿ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರ ಹೋಮಿಯೋ ಚಿಕಿತ್ಸಕರಾದ ಡಾ॥ ಸಕ್ಸೇನಾ ಅವರು ಕೇರಳ ಸರಕಾರದಿಂದ ಸ್ಥಾಪಿತವಾದ ಹೋಮಿಯೋಪೆಥಿಕ್ ಕಾಲೇಜಿನ ಆರಂಭೋತ್ಸವವನ್ನು ನಡೆಸುತ್ತ ತಿಳುಹಿಸಿದರು. ಕೊಟ್ಟಾಯಂ ಬಳಿಯ ಕುರುಚಿಯಲ್ಲಿ ಈ ಕಾಲೇಜನ್ನು ಪ್ರಪ್ರಥಮವಾಗಿ ಸ್ಥಾಪಿಸಲಾಯಿತು. ಇದಕ್ಕೆ ಕೇರಳ ಸರಕಾರದ ಉದಾರವಾದ ಸಹಾಯವೂ ಪ್ರೋತ್ಸಾಹವೂ ಧಾರಾಳವಾಗಿ ನೀಡಲ್ಪಟ್ಟಿದೆ.

ವಿಮಾನ ಕಾರ್ಖಾನೆ ನೌಕರರ ಐಕ್ಯತೆ ಮುರಿಯಲು ಕುತಂತ್ರ

ಕಾರ್ಮಿಕ ದ್ರೋಹಿ 'ಇಂಟಕ್' ಚಟುವಟಿಕೆಗಳಿಂದ ಹುಷಾರ್ !

ಪೋಟಿ ಸಂಘವನ್ನು ವಿಫಲಗೊಳಿಸಿರಿ !

ಹನ್ನೊಂದು ಸಾವಿರ ವಿಮಾನ ಕಾರ್ಖಾನೆ ನೌಕರರನ್ನು ಪ್ರತಿನಿಧಿಸಿ ಅವರ ಹಿತಚಿಂತನೆಗಾಗಿ ಶ್ರಮಿಸುತ್ತ ಬಂದಿರುವ ಹಿಂದೂಸ್ತಾನ್ ವಿಮಾನ ಕಾರ್ಖಾನೆ ನೌಕರರ ಸಂಘವನ್ನೂ, ನೌಕರರ ಐಕ್ಯತೆಯನ್ನು ಮುರಿಯಲು ಕುತಂತ್ರ ಸಾಗುತ್ತಿದೆ. 'ಇಂಟಕ್' ಪ್ರೇರಿತ ಪೋಟೀ ಸಂಘವನ್ನು ರಚಿಸಲಾಗಿದೆ.

ಕೆಲತಿಂಗಳ ಹಿಂದೆ ನಡೆದ ವಿಮಾನ ಕಾರ್ಖಾನೆ ನೌಕರರ ಹೋರಾಟ ಸಮಯದಲ್ಲಿ ಕೆಲಸಗಾರರಿಗೆ ದ್ರೋಹ ಬಗೆದು ಮ್ಯಾನೇಜ್‌ಮೆಂಟನೊಂದಿ ಸೇರಿಕೊಂಡು ಗುಂಡಾಗಿರಿ ನಡೆಸಿದ ವ್ಯಕ್ತಿಗಳೆಲ್ಲರೂ ಪೋಟೀ ಸಂಘದ ಸಂಸ್ಥಾಪಕರಾಗಿದ್ದಾರೆ. ಮಾಜಿ ಜನರಲ್ ಮ್ಯಾನೇಜರ್ ಶ್ರೀ ನಾಗೇಶ್‌ರವರ ಸಹಾಯ ಪಡೆದು, ಸಂಘವನ್ನು ಮುರಿಯಲು ಮಾಡಿದ ಇವರ ಪ್ರಯತ್ನವೆಲ್ಲ ವ್ಯರ್ಥಗೊಂಡಿತ್ತು.

ನೂತನವಾಗಿ ಬಂದಿರುವ ಜನರಲ್ ಮ್ಯಾನೇಜರ್ ಏರ್‌ಮಾರ್ಷಲ್ ಇಂಜನಿಯರ್‌ರವರು ಅಧಿಕಾರ ವಹಿಸಿಕೊಂಡ ಮೇಲೆ ಈ ಐಕ್ಯಭಂಜಕರ ಪುಂಡಾಟಿಕೆಗೆ ಕುತ್ತು ಬಂದಿತು. ಸಂಘದ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿ, ಹಲವು ಮುಖ್ಯ ಪ್ರಶ್ನೆಗಳನ್ನು ಅವರು ಬಗೆಹರಿಸಿದ್ದು, ಸಂಘದ ಗೌರವವನ್ನು ಹೆಚ್ಚಿಸಿದೆ. ಮೂರು ವರುಷಗಳಿಂದ ಇತ್ಯರ್ಥವಾಗದೇ ಕಾದಿದ್ದ ಪ್ರಶ್ನೆಗಳು ಬಗೆಹರಿದಿವೆ. ಇನ್ನೂ ಸಹ ಕೆಲಸದಿಂದ ವಜಾಮಾಡಲ್ಪಟ್ಟವರ ಪ್ರಶ್ನೆಯು ಇತ್ಯರ್ಥವಾಗದೆ ಉಳಿದಿದೆ. ಕೆಲಸಗಾರರಿಗಾಗಿ ಹೋರಾಡಿದ ಕಾರ್ಯಕರ್ತರುಗಳ ಮೇಲೆ ಅನೇಕ ಪೋಲೀಸು ಕೇಸುಗಳು ಇವೆ. ಸಂಘವನ್ನು ಇನ್ನೂ ಬಲಯುತಗೊಳಿಸುವ ಅಗತ್ಯವಿರುವ ಕಾಲದಲ್ಲಿ, ಐಕ್ಯಭಂಜಕರ ಈ ಕುತಂತ್ರ ಸಾಗಿದೆ. ಅದು ಅವರ ಇತರ ಪ್ರಯತ್ನಗಳಂತೆಯೇ ಮಣ್ಣುಗೂಡುವುದರಲ್ಲಿ ಸಂಶಯವಿಲ್ಲ. ನೌಕರರ ಸಂಘ ಎಚ್ಚರದಿಂದಿದ್ದು ಸಂಘವನ್ನು ಬಲಗೊಳಿಸುವುದು ಅತ್ಯಗತ್ಯವಾಗಿದೆ.

ಒಂದು ಕೈಗಾರಿಕೆಗೆ ಒಂದೇ ಸಂಘವಿರಬೇಕೆಂದು ಕಾಂಗ್ರೆಸ್ ನಾಯಕರುಗಳೇ ಉಪದೇಶಿಸುತ್ತಿದ್ದಾರೆ. ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಐಕ್ಯತೆ ಮೂಡಬೇಕು, ಐಕ್ಯ ಕಾರ್ಯಾಚರಣೆಗಳಾಗಬೇಕು ಎಂಬುದು ಕಾರ್ಮಿಕವರ್ಗದ ಬಯಕೆಯಾಗಿದೆ. ತಮ್ಮ ನಾಯಕರ ಹೇಳಿಕೆಗಳನ್ನೇ ಸುಳ್ಳಾಗಿಸಿ 'ಇಂಟಕ್' ಒಂದು ಸಂಘವಿರುವಾಗ ಪೋಟಿ ಸಂಘ ಸ್ಥಾಪಿಸಲು ಪ್ರೇರೇಪಿಸಿರುವುದು ಖಂಡನೀಯವಾಗಿದೆ.

ಸಂಘದಲ್ಲಿ ಹಿಂದೆ ಉಪಾಧ್ಯಕ್ಷರಾಗಿದ್ದ ಎ.ವಿ. ಸುಂದರಂ, ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ಬಿ. ಎನ್. ನಾರಾಯಣ ಮತ್ತಿತರರು ಪೋಟಿ ಸಂಘದ ಸ್ಥಾಪಕರಾಗಿದ್ದಾರೆ ಪೋಟಿ ಸಂಘದ ಘಟನಾವಳಿ, ನಿಬಂಧನೆಗಳನ್ನು ಮೈಸೂರು ರಾಜ್ಯ 'ಇಂಟಕ್' ಅಧ್ಯಕ್ಷ ಜಿ. ವಿ. ರಾಮಚಾರ್‌ರವರು ತಯಾರಿಸಿಕೊಟ್ಟಿದ್ದಾರೆ. ಕಾಂಗ್ರೆಸ್ ನಾಯಕರಾದ ಮತ್ತು ಪಾರ್ಲಿಮೆಂಟ್ ಸದಸ್ಯರಾದ ಎನ್. ಕೇಶವ ಪೋಟಿ ಸಂಘದ ಅಧ್ಯಕ್ಷರಾಗಿದ್ದಾರೆ. ಮುತ್ತುಸ್ವಾಮಿ ಉಪಾಧ್ಯಕ್ಷರಾಗಿಯೂ, ಬಿ. ಎನ್. ನಾರಾಯಣ ಮತ್ತು ಸುಂದರಂ ಇವರುಗಳು ಕಾರ್ಯದರ್ಶಿಗಳಾಗಿಯೂ ಇರುವ ಸಂಘ ಸ್ಥಾಪನೆಯಾಗಿದೆ. ಪೋಟೀ ಸಂಘವನ್ನು ರಿಜಿಸ್ಟರ್‌ಮಾಡಿಸಲು ಯತ್ನಿಸಲಾಗುತ್ತಿದೆ.

ಎನ್. ಕೇಶವರವರಿಗೆ ಇಂಥ ಚಟುವಟಿಕೆ ಹೊಸತೇನಲ್ಲ. ಬೆಂಗಳೂರಿನ ಕೃಷ್ಣ ವೀವಿಂಗ್ ಮಿಲ್ಸ್‌ನಲ್ಲಿಯೂ ಸಹ ನಡೆಸಿದ್ದರು. ಆದರೆ ಕೆಲಸಗಾರರು ಅವರಿಗೆ ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಸರಿಯಾದ ಜವಾಬಿತ್ತರು. ಪೋಟಿ ಸಂಘದವರು ಈವರೆಗೆ ನಡೆಸಿರುವ ಸಭೆಗಳಿಗೆ ಕಾರ್ಮಿಕರು ಬರಲೇ ಇಲ್ಲವೆಂದು ತಿಳಿದುಬಂದಿದೆ. ಅಂದಮೇಲೆ ಇವರಿಗೆ ಕಾರ್ಮಿಕರ ಬೆಂಬಲವಿಲ್ಲದೆಂಬುದು ರುಜುವಾತಾಗಿದೆ. ಐವತ್ತು ಅರವತ್ತು ಮಂದಿ ಸಭೆಗೆ ಬಂದರೆ ಅವರಿಗೆ ವೈಗಾವಲು ಎರಡು ಪೋಲೀಸ್ ವ್ಯಾನ್ ಬರುತ್ತಿದೆಯೆಂದು ತಿಳಿದುಬಂದಿದೆ.

ಕೆಲಸಗಾರರ ಬೆಂಬಲವಿಲ್ಲದಿದ್ದರೂ ಅವರು ತಮ್ಮ ಕುತಂತ್ರದಿಂದ ನೌಕರರ ನಡುವೆ ಒಡಕುಂಟುಮಾಡಲು ಯತ್ನಿಸುವುದರಲ್ಲಿ ಸಂಶಯವಿಲ್ಲ. ಇಂಥ ಐಕ್ಯಭಂಜಕರ ವಿರುದ್ಧ ನೌಕರರು ಸತತವಾಗಿ ಹೋರಾಟ ನಡೆಸಬೇಕಾಗಿದೆ. ಹಲವು ಹೋರಾಟಗಳನ್ನು ನಡೆಸಿರುವ ವಿಮಾನ ಕಾರ್ಖಾನೆ ನೌಕರರು, ಇದರಲ್ಲಿ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ.

ನೀವೇನು ಹೇಳುತ್ತೀರಿ ?

(೪ನೇ ಪುಟದಿಂದ)

ರಾಜಕಾರಣಿಗಳು ಈ ಕೆಟ್ಟನೀತಿಯನ್ನು ಬಿಟ್ಟುಕೊಡಬೇಕೆಂದು ನಾವು ಮನವಿ ಮಾಡಿಕೊಳ್ಳುತ್ತೇವೆ."

ದೇಶಾಭಿಮಾನಿ— "....ಅಲಪ್ಪಿಯಲ್ಲಿ ನಡೆಯುವ ವಿದ್ಯಾರ್ಥಿಗಳ ಹೋರಾಟವು, ನಮಗೆ ದೊರೆತಿರುವ ವಿವರಗಳ ಬೆಳಕಿನಲ್ಲಿ, ವಿವೇಕ ಮತ್ತು ಸದುದ್ದೇಶದಿಂದ ಕೂಡಿದ್ದೆಂದು ನಮಗನಿಸುವುದಿಲ್ಲ.

...."ವಾಟರ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಶನ್" ಯಾರ ಚಳುವಳಿಯೂ ಇಲ್ಲದೆನೇ ವಿದ್ಯಾರ್ಥಿಗಳಿಗೆ ಟಿಕೇಟು ದರದ ಅರ್ಧಾಂಶದಷ್ಟು ರಿಯಾಯಿತಿ ಕೊಟ್ಟಿದೆ. ಒಂದು ತಿಂಗಳ "ಸೀಸನ್ ಟಿಕೇಟು ಕೊಂಡುಕೊಳ್ಳುವವರಿಗೆ ಅದಕ್ಕಿಂತಲೂ ಹೆಚ್ಚು ಸೌಲಭ್ಯತೆ ಲಭಿಸುತ್ತದೆ.

ಹಾಗಾದರೆ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಇನ್ನೂ ಬೇಕಾಗಿರುವುದೇನು ? ಹಿಂದೆ ಕೆಲವು ಕೆಥೋಲಿಕ್ ವಿದ್ಯಾಲಯಗಳಿಗೆ ಪ್ರತ್ಯೇಕ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಕೆಲವು 'ಲಾಂಚ್' ಮಾಲಿಕರು ಕೆಲವು ಕಡೆಗಳಲ್ಲಿ ತೀರ ಕಡಿಮೆ ಚಾರ್ಜು ತೆಗೆದುಕೊಳ್ಳುತ್ತಿದ್ದರೆಂದು ಹೇಳಲಾಗುತ್ತದೆ. ಅದೇ ಸೌಲಭ್ಯ ಈಗ ಎಲ್ಲರಿಗೂ ದೊರಕಬೇಕೆಂದು ಈ ಕೆಲವು ವಿದ್ಯಾರ್ಥಿಗಳು ಕೇಳುತ್ತಾರೆ. ನಿಜವಾಗಿ ಎಲ್ಲಿಯಾದರೂ ಇಂಥ ಸೌಲಭ್ಯತೆ ಇತ್ತೇ ಎಂದು ವಿಚಾರಿಸುವುದಾಗಿಯೂ, ಇದ್ದಿದ್ದರೆ ಅದನ್ನೆ ಮುಂದುವರಿಸಬೇಕೆಂದು ಕಾರ್ಪೊರೇಶನ್ನಿಗೆ ಶಿಫಾರಸು ಮಾಡುವುದಾಗಿಯೂ ಸರಕಾರದ ಪರವಾಗಿ ಮುಖ್ಯ ಮಂತ್ರಿಯವರು ಆಶ್ವಾಸನೆ ಕೊಟ್ಟಿರುತ್ತಾರೆ.

ಈ ಗಲಭೆಗೆ ನಿಜವಾದ ಕಾರಣವೇನೂ ಇಲ್ಲ. ರಾಜಕೀಯ ದುರುದ್ದೇಶವೇ ಇದರ ಹಿಂದೆ ಅವಿತಿರುವುದು........"

——

ಆಕ್ರಮಣಕಾರಿ ಅಮೇರಿಕೆಗೆ ಧಿಃಕ್ಕಾರ !

ಲೆಬನಾನ್‌ನಿಂದ ಅವರ ಸೈನ್ಯ ಹೊರಟುಹೋಗಲಿ

ಬೆಂಗಳೂರು ನಾಗರಿಕರ ಪ್ರತಿಭಟನೆ

ಬೆಂಗಳೂರು ಜಿಲ್ಲಾ ಸಮಿತಿಯ ಕರೆಯಂತೆ ಕಮ್ಯೂನಿಸ್ಟ್ ಪಾರ್ಟಿಯ ಬೆಂಗಳೂರು ಸಿಟಿ ಶಾಖೆಗಳ ಆಶ್ರಯದಲ್ಲಿ ಲೆಬನಾನ್ ದುರಾಕ್ರಮಣವನ್ನು ಪ್ರತಿಭಟಿಸಲು ತಾ. 21—7—58ರ ಸಂಜೆ ಮೆರವಣಿಗೆಯನ್ನೂ ಸಭೆಯನ್ನೂ ಏರ್ಪಡಿಸಲಾಗಿತ್ತು. ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಸಮಿತಿ ಕಾರ್ಯದರ್ಶಿಗಳ ನೇತೃತ್ವದಲ್ಲಿ ಹೊರಟ ಮೆರವಣಿಗೆಯು, ''ಬ್ರಿಟಿಷ್ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಧಿಕ್ಕಾರ" ''ಯುದ್ಧಪ್ರಚೋದಕ ಐಕ್, ಮ್ಯಾಕ್ಮಿಲನ್‌ರಿಗೆ ಧಿಕ್ಕಾರ! "ಲೆಬನ್‌ನಿಂದ ಕಾಲ್ತೆಗೆಯಿರಿ! ಅರಬ್ ರಾಷ್ಟ್ರೀಯತೆ ಚಿರಾಯುವಾಗಲಿ, ವಿಶ್ವಶಾಂತಿ ಚಿರಾಯುವಾಗಲಿ" ಎಂಬ ಘೋಷಣೆಗಳನ್ನು ಮಾಡುತ್ತಾ ಅಮೇರಿಕನ್ ವಾರ್ತಾ ಸಂಸ್ಥೆಯ ಪುಸ್ತಕ ಭಂಡಾರದ ವರೆಗೆ ಹೋಗಿ, ನಂತರ ಟೌನ್ ಹಾಲ್ ಎದುರು ಮೈದಾನದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಮ್ಯೂನಿಸ್ಟ್ ಕಾರ್ಪೊರೇಟರ್ ಕಾ॥ ಡಿ. ಎಸ್. ಶ್ರೀರಾಮುಲುರವರು ವಹಿಸಿದ್ದರು. ಸಭೆಯ ಆರಂಭದಲ್ಲಿ ಕಾ॥ ಎಸ್. ಜಿ. ಜಯರಾಮ್‌ರವರು ಸಭೆಯನ್ನು ಕರೆದಿರುವ ಉದ್ದೇಶವನ್ನು ಕುರಿತು ಮಾತನಾಡಿದರು. ಕಮ್ಯೂನಿಸ್ಟ್ ಪಾರ್ಟಿ ಕರ್ನಾಟಕ ಪ್ರಾಂತ ಸಮಿತಿಯ ಸದಸ್ಯರಾದ ಕಾ॥ ಬಿ. ವಿ. ಕಕ್ಕಿಲ್ಲಾಯರವರು ತಮ್ಮ ಭಾಷಣದಲ್ಲಿ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಅವ್ಯಾಹಿತ ದುರಾಕ್ರಮಣವನ್ನು ಖಂಡಿಸಿ, ಸ್ವಾತಂತ್ರ್ಯಾಪೇಕ್ಷಿ ಲೆಬನಾನ್ ಜನತೆಗೆ ಬೆಂಬಲ ಕೊಡಲು ಹಾಗೂ ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ನಮ್ಮ ದೇಶದ ಇಡೀ ಜನತೆ ಒಟ್ಟುಗೂಡಬೇಕಾಗಿದೆ ಎಂದೂ, ಕಮ್ಯೂನಿಸ್ಟ್ ಪಾರ್ಟಿಯ ನಿಧಿಗೆ ಧನಸಹಾಯ ಮಾಡಬೇಕೆಂದೂ ಕೇಳಿಕೊಂಡರು. ನಂತರ ಕಾ॥ ಯು. ಎಸ್. ವೆಂಕಟರಾಮನ್‌ರವರಿಂದ ಮಂಡಿಸಲ್ಪಟ್ಟು, ಕಾ॥ ಐ. ಮರಿದಾಸ್‌ರವರಿಂದ ಅನುಮೋದಿಸಲ್ಪಟ್ಟ ಕೆಳಕಂಡ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು:

ಅರಬ್ ರಾಷ್ಟ್ರಗಳಲ್ಲಿನ ಜನತೆಯಲ್ಲಿ ಬೆಳೆಯುತ್ತಿರುವ ರಾಷ್ಟ್ರೀಯತೆಯನ್ನು ನಾಶಮಾಡಲೆತ್ನಿಸುತ್ತಿರುವ ಅಮೇರಿಕನ್ ಹಾಗೂ ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನೂ, ಅವರ ಬಂಟರನ್ನೂ ನಿರ್ನಾಮ ಮಾಡುವ ಕ್ರಮ ಅಲ್ಲಿ ಜರುಗುತ್ತಿದೆ. ಇದರ ವಿರುದ್ಧವಾಗಿ, ಈ ಸಾಮ್ರಾಜ್ಯಶಾಹಿಗಳು, ತಮ್ಮ ನೆಲೆಯನ್ನು ಭದ್ರಪಡಿಸಿಕೊಳ್ಳಲು, ಯತ್ನಿಸುತ್ತ, ದುರಾಕ್ರಮಣ ನಡೆಸುತ್ತಿದ್ದಾರೆ. ಇರಾಕಿನಲ್ಲಿ ತಮ್ಮ ಕುತಂತ್ರಗಳೆಲ್ಲಾ ಕುಸಿದುಬಿದ್ದು, ಜನತೆಯ ಸರಕಾರ ರಚನೆಯಾದ ಮೇಲೆ, ನೆರೆರಾಷ್ಟ್ರದಲ್ಲಿ ತಮ್ಮ ನೆಲೆಯನ್ನು, ತಮ್ಮ ಭಂಟರನ್ನು ಉಳಿಸಿಕೊಳ್ಳಲು, ಜನತೆಯ ಹೋರಾಟವನ್ನು ಬಗ್ಗುಬಡಿಯುವುದಕ್ಕಾಗಿ, ಲೆಬನಾನ್ ರಾಷ್ಟ್ರಕ್ಕೆ ತಮ್ಮ ಸೇನೆಯನ್ನು ಕಳಿಸಿರುವುದನ್ನು ಈ ಸಭೆಯು, ಅನಾಗರಿಕ, ಅಸಭ್ಯ ದುರ್ವರ್ತನೆಯೆಂದು ಕರೆದು ತೀವ್ರವಾಗಿ ಖಂಡಿಸುತ್ತದೆ. ಈ ಕೂಡಲೇ ಲೆಬನಾನ್‌ನಿಂದ ಸೈನ್ಯವನ್ನು ಹಿಂತೆಗೆಸಬೇಕೆಂದು ಒತ್ತಾಯಪಡಿಸುತ್ತದೆ. ಮತ್ತು ಶಾಂತಿಸ್ಥಾಪನೆಗಾಗಿ, ಭಾರತ ಸರ್ಕಾರ ಕೈಗೊಳ್ಳುವ ಎಲ್ಲಾ ಕ್ರಮಗಳಿಗೆ ತನ್ನೆಲ್ಲಾ ಬೆಂಬಲವನ್ನು ನೀಡುತ್ತದೆ.

ಅಧ್ಯಕ್ಷರ ಮುಕ್ತಾಯ ಭಾಷಣದೊಂದಿಗೆ ಸಭೆ ಮುಕ್ತಾಯವಾಯಿತು.

ಜಿಲ್ಲೆಯಲ್ಲಿ ಅಕ್ಕಿಯ ಬೆಲೆ ಮಿತಿ ಮೀರುತ್ತಿದೆ!

ಕಳೆದ ತಿಂಗಳಿನಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ದ. ಕ. ಜಿಲ್ಲಾ ಸಮಿತಿಯ ಸಭೆಯು ಜಿಲ್ಲೆಯಲ್ಲಿ ಅಕ್ಕಿಯ ಬೆಲೆ ದಿನೇ ದಿನೇ ಏರುತ್ತಿರುವದಕ್ಕೆ ಕಳವಳವನ್ನು ವ್ಯಕ್ತಪಡಿಸಿ ಜಿಲ್ಲೆಯಾದ್ಯಂತವಾಗಿ ಸರಕಾರ ಅಗ್ಗ ದರದ ಅಕ್ಕಿಯಂಗಡಿಗಳನ್ನು ತೆರೆಯಬೇಕೆಂದು ಸರಕಾರವನ್ನು ವಿನಂತಿಸಿಕೊಂಡಿತ್ತು. ಕಳೆದ ತಾ. 3ರಂದು ಕಮ್ಯೂನಿಸ್ಟ್ ಪಾರ್ಟಿಯ ಶಿಷ್ಟಮಂಡಲವೊಂದು ಮೈಸೂರು ಮುಖ್ಯ ಮಂತ್ರಿಯವರನ್ನು ಭೇಟಿಯಾಗಿ ಜಿಲ್ಲೆಯಾದ್ಯಂತವಾಗಿ ಸರಕಾರವು ಸೇರಿಗೆ ಏಳು ಆಣೆಯಂತೆ ಕುಚ್ಚಿಗೆ (ಕುಸಲ್) ಅಕ್ಕಿಯನ್ನು ವಿಕ್ರಯಿಸುವ ನ್ಯಾಯ ದರದ ಅಕ್ಕಿಯಂಗಡಿಗಳನ್ನು ತೆರೆಯಬೇಕೆಂಬ ಮನವಿಯನ್ನು ಅರ್ಪಿಸಿತು.

ಆದರೆ ಮೈಸೂರು ಸರಕಾರ ಈ ವಿಷಯದಲ್ಲಿ ಇನ್ನೂ ಮೌನವಾಗಿ ಕುಳಿತಿದೆ. ಅಗ್ಗ ದರದ ಅಕ್ಕಿಯಂಗಡಿಗಳನ್ನು ತೆರೆಯುವಂತೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಂತೆ ಕಾಣುವುದಿಲ್ಲ.

ಪ್ರತಿ ವರ್ಷವೂ ಮಳೆಗಾಲ ಶುರುವಾಗುವಾಗ ಅಕ್ಕಿಯ ದರ ಹೆಚ್ಚುವುದು. ಆದರೆ ಈ ವರುಷ ಹಿಂದಿನ ವರುಷಗಳಿಗಿಂತಲೂ ಬೆಲೆ ಏರಿದೆ. ಅಕ್ಕಿ ಸೇರು ಒಂದಕ್ಕೆ 9 ಆಣೆಯಿಂದ 10 ಆಣೆಯ ತನಕ ವಾಗಿದೆ. ಮುಂದಿನ ಪೈರು ಕಟಾವಿಗೆ ಇನ್ನೂ ಸುಮಾರು ಮೂರು ತಿಂಗಳುಗಳಿವೆ. ಈಗ ಏರುತ್ತಿರುವಂತೆಯೇ ಬೆಲೆ ಏರುತ್ತಾ ಹೋದರೆ ಮುಂದಿನ ಮೂರು ತಿಂಗಳುಗಳಲ್ಲಿ ಜನಸಾಮಾನ್ಯರು ಉಣ್ಣುವುದೇ ಕಷ್ಟಸಾಧ್ಯ ಎಂದು ಜನರು ಚಿಂತಿಸುವುದರಲ್ಲಿ ಅಸ್ವಾಭಾವಿಕವಾದುದೇನೂ ಇಲ್ಲ.

ಈ ಬಾರಿ ಬಂದ ಮಳೆಯ ಸ್ವರೂಪವೂ ವಿಪರೀತ. ಬೇಸಾಯ ಆರಂಭವಾಗುವ ವೇಳೆ ಮಳೆಯೇ ಇಲ್ಲ. ನಂತರ ಆರಂಭವಾದ ಭಾರೀ ಮಳೆಯಿಂದಾಗಿ ಕೆಲವು ಕಡೆ ಬೇಸಾಯ ಮಾಡಲಿಕ್ಕೂ ಅಸಾಧ್ಯವಾಗಿದೆ. ಪೈರು ನೆಟ್ಟ ಹಲವು ಪ್ರದೇಶಗಳಲ್ಲಿ ನೆರೆಯಿಂದಾಗಿ ಬೆಳೆ ಹಾಳಾಗಿದೆ. ಹೀಗಿರುವುದರಿಂದ ಮುಂದಿನ ವರುಷ ಅಕ್ಕಿ ಉತ್ಪತ್ತಿ ಕಡಿಮೆಯಾಗಬಹುದೆಂಬ ಭಯದೊಡನೇ ಅದರ ಪರಿಣಾಮವಾಗಿ ಈ ವರುಷ ಅಕ್ಕಿಯ ಬೆಲೆ ಇನ್ನೂ ಹೆಚ್ಚಬಹುದೆಂಬ ಅಂಜಿಕೆಯು ಜನರಲ್ಲಿ ಉಂಟಾಗಿದೆ.

ಹೀಗೆ ಆಹಾರ ಬೆಲೆಯು ಗಂಭೀರತೆ ಎಷ್ಟರಮಟ್ಟಿಗೆ ಇದೆಯೆಂದರೆ ಕೆಲವು ಮಂಡಲ ಕಾಂಗ್ರೆಸುಗಳೂ ನ್ಯಾಯ ದರದ ಅಕ್ಕಿಯಂಗಡಿಗಳನ್ನು ತೆರೆಯುವಂತೆ ಸರಕಾರವನ್ನು ಕೇಳಿಕೊಳ್ಳುವ ಠರಾವುಗಳನ್ನು ಮಾಡಿವೆ.

ಹೀಗೆಲ್ಲಾ ಜನರ ಒತ್ತಾಯಗಳಿದ್ದರೂ ಜತ್ತಿ ಸರಕಾರ ಕಣ್ಣುಮುಚ್ಚಿ ಕುಳಿತಿದೆ. ನೆರೆಯ ಕೇರಳ ಸರಕಾರ ಮುಂಜಾಗ್ರತೆಯಿಂದ ಮೊದಲೇ ಮಳೆಗಾಲಕ್ಕೆ ಬೇಕಾದ ಅಕ್ಕಿಯನ್ನು ದಾಸ್ತಾನು ಮಾಡಿಟ್ಟು, ಅಗ್ಗ ದರದ ಅಕ್ಕಿಯಂಗಡಿಗಳಲ್ಲಿ ಕಡಿಮೆ ಬೆಲೆಗೆ ಮಾರುತ್ತಿದೆ. ಆದರೆ ಮೈಸೂರಿನ ಜತ್ತಿ ಸರಕಾರ ಅಕ್ಕಿಯ ಬೆಲೆಯನ್ನು ಹೆಚ್ಚಿಸಲು ಹಿರಿಯ ಭೂಮಾಲೀಕರಿಗೂ, ದೊಡ್ಡ ದೊಡ್ಡ ವರ್ತಕರಿಗೂ ಅಪ್ರತ್ಯಕ್ಷವಾಗಿ ಪ್ರೋತ್ಸಾಹ ನೀಡುವ ಉದ್ದೇಶದಿಂದ ಮೌನವಾಗಿದೆ.

ಮೈಸೂರು ಸರಕಾರದ ಈ ನೀತಿಯಿಂದ ಜಿಲ್ಲೆಯ ಜನರಲ್ಲಿ ಮುಖ್ಯವಾಗಿ ಅಲ್ಪ ಸಂಬಳ ಪಡೆಯುವ ಮಜೂರರಲ್ಲೂ, ಮಧ್ಯಮ ವರ್ಗದವರಲ್ಲೂ, ರೈತರಲ್ಲೂ ತೀವ್ರ ಅತೃಪ್ತಿಯುಂಟಾಗಿದೆ. ಅಲ್ಲಲ್ಲಿ ಅಗ್ಗ ದರದ ಅಕ್ಕಿಯಂಗಡಿಗಳನ್ನು ತೆರೆಯುವಂತೆ ಸರಕಾರವನ್ನೂ ಜಿಲ್ಲಾಧಿಕಾರಿಗಳನ್ನೂ ಒತ್ತಾಯಿಸುವ ಠರಾವುಗಳನ್ನು ಮಾಡಿ ತಂತಿ ಮೂಲಕವಾಗಿ ಕಳುಹಿಸಲ್ಪಡುತ್ತಿವೆ. ಇನ್ನಾದರೂ ಜತ್ತಿ ಸರಕಾರ ಈ ಪರಿಸ್ಥಿತಿಯ ಗಂಭೀರತೆಯನ್ನು ತಿಳಿದು ಜನರಿಗೆ ಪರಿಹಾರ ಒದಗಿಸಲಾರದೆ?

ದ. ಕ. ಜಿಲ್ಲಾ ಬೋರ್ಡು ಅಧ್ಯಾಪಕರಿಗೆ ಮೂರು ತಿಂಗಳಿಂದ ವೇತನವಿಲ್ಲ

ದ. ಕನ್ನಡ ಜಿಲ್ಲಾ ಬೋರ್ಡಿನ ಅಧೀನವಿರುವ ಶಾಲೆಗಳಲ್ಲಿ ಸುಮಾರು 3000 ಮಂದಿ ಅಧ್ಯಾಪಕರು ದುಡಿಯುತ್ತಾರೆ. ಇವರಿಗೆ ಕಳೆದ ಏಪ್ರಿಲ್ ತಿಂಗಳಿನಿಂದ ಇನ್ನೂ ಸಂಬಳಸಿಕ್ಕಿಲ್ಲ. ಕಳೆದ ಮೂರು ತಿಂಗಳುಗಳಿಂದ ಅವರು ಉಪವಾಸ ಬೀಳಬೇಕಾಗಿ ಬಂದಿದೆ.

ಜಿಲ್ಲಾ ಬೋರ್ಡು ತನ್ನ ಅಧ್ಯಾಪಕರಿಗೆ ಕೊಡುವ ಸಂಬಳ ಅತ್ಯಲ್ಪ. ಈ ಅಲ್ಪ ಸಂಬಳವೂ ಸಕಾಲಕ್ಕೆ ಸಿಗದಿದ್ದರೆ ಅವರು ಜೀವನ ತೆಗೆಯುವುದಾದರೂ ಹೇಗೆ?

ಇದಕ್ಕೆ ಜಿಲ್ಲಾ ಬೋರ್ಡು ಒಂದು ಮಟ್ಟಿಗೆ ಕಾರಣವಾದರೂ ಇದರ ಹೆಚ್ಚಿನ ಜವಾಬ್ದಾರಿ ಇರುವುದು ಮೈಸೂರು ಸರಕಾರದ ಮೇಲೆ. ಅಧ್ಯಾಪಕರುಗಳ ಸಂಬಳದ ಹಣ ಗ್ರ್ಯಾಂಟುಗಳ ರೂಪದಲ್ಲಿ ಜಿಲ್ಲಾ ಬೋರ್ಡಿಗೆ ಸರಕಾರದಿಂದ ದೊರೆಯುವಂತಹದು. ಇದನ್ನು ಮೈಸೂರು ಸರಕಾರ ದ.ಕ. ಜಿಲ್ಲಾ ಬೋರ್ಡಿಗೆ ಸರಿಯಾಗಿ ಕೊಡದಿರುವುದೇ ಈ ಸಂಬಳ ಬಟವಾಡೆಯಾಗದಿರಲು ಕಾರಣ ಎನ್ನಲಾಗಿದೆ.

ಮಲಬಾರ್ ಜಿಲ್ಲಾ ಬೋರ್ಡಿನಲ್ಲೂ ಇದೇ ರೀತಿಯ ಅವ್ಯವಸ್ಥೆ ಇತ್ತು. ಆದರೆ ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಬಂದೊಡನೆಯೇ ಸರಕಾರವೇ ನೇರವಾಗಿ ಜಿಲ್ಲಾ ಬೋರ್ಡಿನ ಅಧ್ಯಾಪಕರಿಗೆ ವೇತನ ವಿತರಣೆ ಮಾಡುವ ಕ್ರಮವಹಿಸಿ ಈ ಅವ್ಯವಸ್ಥೆಗಳನ್ನು ತಪ್ಪಿಸಿತು.

ಆದರೆ ಮೈಸೂರು ಸರಕಾರ ಅಧ್ಯಾಪಕರ ಕಡೆಗೆ ಹೆಚ್ಚಿನ ಅಲಕ್ಷ್ಯ ತೋರಿಸುತ್ತಿದೆ. ಇತ್ತೀಚೆಗೆ ವಿದ್ಯಾಮಂತ್ರಿ ಶ್ರೀ ಅಣ್ಣಾರಾವ್ ಗಣಮುಖಿಯವರು ಮಾತನಾಡುತ್ತಾ "ಸಂಬಳಕ್ಕಾಗಿ ಕೆಲಸಮಾಡುವ ಈ ಉದ್ಯೋಗವನ್ನು ಬಿಟ್ಟು ಬಿಡುವುದು ಲೇಸು" ಎಂದು ಹೇಳಿದಂತಹ ಮಾತುಗಳು ಮೈಸೂರು ಕಾಂಗ್ರೆಸ್ ಮಂತ್ರಿಮಂಡಲದ ದಿವಾಳಿಕೋರತನವನ್ನ ಸ್ಪಷ್ಟ ಪ್ರದರ್ಶಿಸುತ್ತಿದೆ. ಮಾನ್ಯ ಮಂತ್ರಿಗಳ ಅಭಿಪ್ರಾಯದಂತೆ ಅಧ್ಯಾಪಕರುಗಳಿಗೆ ವೇತನದ ಅಗತ್ಯವಿಲ್ಲ. ಅವರು ಗಾಳಿ ಸೇವನೆಯಿಂದಲೇ ಬದುಕಬೇಕು!! ಅವರ ಈ ಅಭಿಪ್ರಾಯವೇ ಕಾರ್ಯರೂಪಕ್ಕೆ ಬಂದು ದ.ಕ ಜಿಲ್ಲೆಯ ಬೋರ್ಡು ಅಧ್ಯಾಪಕರುಗಳಿಗೆ ವೇತನ ಕೊಡಲಾಗಿಲ್ಲವೆಂದು ಭಾವಿಸಿದರೆ ತಪ್ಪಾಗದು.

ಕಾಸರಗೋಡು ತಾಲೂಕಿನ ಅಧ್ಯಾಪಕರಿಗೂ ಅನ್ಯಾಯ

ದ. ಕ. ಜಿಲ್ಲಾ ಬೋರ್ಡು ಮತ್ತು ಮೈಸೂರು ಸರಕಾರದ ನಿಷ್ಕ್ರಿಯತೆಯ ಪರಿಣಾಮವಾಗಿ ಕಾಸರಗೋಡು ತಾಲೂಕಿನ ಅಧ್ಯಾಪಕರುಗಳಿಗೂ ಅನ್ಯಾಯವಾಗುತ್ತಿದೆ.

ಪ್ರಾಂತ ಪುನರ್ವಿಂಗಡನೆಯಾಗುವ ಮೊದಲು ಕಾಸರಗೋಡು ತಾಲೂಕು ದ. ಕ. ಜಿಲ್ಲಾ ಬೋರ್ಡಿನ ಕೈಕೆಳಗಿತ್ತು. ಆನಂತರ ಮಲಬಾರ್ ಜಿಲ್ಲಾ ಬೋರ್ಡಿಗೆ ಸೇರಿಸಲ್ಪಟ್ಟಿತು.

ಕಾಸರಗೋಡು ತಾಲೂಕು ದ. ಕ. ಜಿಲ್ಲೆಯಲ್ಲಿರುವಾಗ ಆ ತಾಲೂಕಿನ ಜಿ. ಬೋ. ಅಧ್ಯಾಪಕರ ಪ್ರೊವಿಡೆಂಟ್ ಫಂಡಿನ ಹಣ ದ. ಕ. ಜಿಲ್ಲಾ ಬೋರ್ಡ್‌ನ ವಶವಿತ್ತು. ಪ್ರಾಂತ ಪುನರ್ವಿಂಗಡನೆಯಾದ ನಂತರ ಆ ಹಣವನ್ನು ಮಲಬಾರ್ ಜಿಲ್ಲಾ ಬೋರ್ಡಿಗೆ ಸ್ಥಳಾಂತರಿಸಬೇಕಿತ್ತು. ಆದರೆ ಅದಿನ್ನೂ ಸ್ಥಳಾಂತರವಾಗಿಲ್ಲ. ಪರಿಣಾಮವಾಗಿ ಕಳೆದ ಎರಡು ವರುಷಗಳಲ್ಲಿ ನಿವೃತ್ತರಾದ ಕಾಸರಗೋಡು ತಾಲೂಕಿನ ಅಧ್ಯಾಪಕರುಗಳಿಗೆ ಪ್ರೊವಿಡೆಂಟ್ ಫಂಡಿನ ಹಣವೇ ಸಿಕ್ಕಿಲ್ಲ. ಈ ವಿಷಯದಲ್ಲಿ ಜಿಲ್ಲಾ ಬೋರ್ಡಿಗೆ ಏನೂ ಜವಾಬ್ದಾರಿ ಇಲ್ಲವೆಂದೂ ಎರಡು ಪ್ರಾಂತಗಳೊಳಗಣ ಈ ವ್ಯವಹಾರಗಳು ಸರಕಾರೀ ಮಟ್ಟದಲ್ಲೇ ನಡೆಯಬೇಕೆಂದೂ ಹೇಳಲಾಗುತ್ತಿದೆ. ಈ ವಿಷಯವನ್ನು ಕೇರಳ ಸರಕಾರ ಮೈಸೂರು ಸರಕಾರದ ಗಮನಕ್ಕೂ ತಂದಿದೆಯೆಂದೂ ಗೊತ್ತಾಗಿದೆ. ಆದರೆ ಮೈಸೂರು ಕಾಂಗ್ರೆಸ್ ಸರಕಾರ ತನ್ನ ಮೌನಮುದ್ರೆಯನ್ನು ಇನ್ನೂ ಒಡೆದಿಲ್ಲ. ಪರಿಣಾಮವಾಗಿ ಕಾಸರಗೋಡಿನ ಅಧ್ಯಾಪಕರುಗಳಿಗೆ ತುಂಬಾ ಅನ್ಯಾಯವಾಗಿದೆ.

ಗೋಡೆ ಜರಿದುಬಿದ್ದು ೬ ಜನರ ಜೀವಂತ ಸಮಾಧಿ

ಮಂಗಳೂರಿನ ಬಳಿ ಇರುವ ಪದಂಗಡಿಯ ನಾರಾಯಣ ಮಲ್ಯರ ಗೇರುಬೀಜ ಕಾರ್ಖಾನೆಯ ಸುಮಾರು 70 ಅಡಿ ಉದ್ದ 15 ಅಡಿ ಅಗಲ ಆವರಣದ ಗೋಡೆಯೊಂದು ವಿಪರೀತ ಮಳೆಯ ಬಾಧೆಗೆ ನಿಲ್ಲಲಾರದೆ ಇತ್ತೀಚೆಗೆ ಅದರ ಪಕ್ಕದಲ್ಲಿರುವ ಮನೆಗಳ ಮೇಲೆ ಕುಸಿದುಬಿದ್ದು 6 ಮಂದಿ ಅಲ್ಲೇ ಜೀವಂತ ಸಮಾಧಿ ಹೊಂದಿದರು. ಮೂರು ಮಂದಿಗೆ ಗಾಯಗಳಾಗಿದ್ದು ವೀರಮ್ಮ ಎಂಬ ಮಗು ಆಸ್ಪತ್ರೆಯಲ್ಲಿ ಮೃತಿಯನ್ನೈದಿತು.

ಮಂಗಳೂರಿನ ಇತಿಹಾಸದಲ್ಲೇ ಇಂತಹ ದುರಂತ ಇತ್ತೀಚೆಗೆ ನಡೆದುದಿಲ್ಲ.

ಈ ಗೋಡೆಯು ಹಿಂದೆ ಎರಡು ಬಾರಿ ಕುಸಿದುಬಿದ್ದಿತ್ತೆಂದೂ ಆದರೆ ಪ್ರಾಣಾಪಾಯವಾಗಿರಲಿಲ್ಲವೆಂದೂ, ಇದರ ಅಪಾಯ

ಮಂಗಳೂರು ವಾರ್ತೆ

ವನ್ನು ಸದ್ರಿ ಕಾರ್ಖಾನೆಯ ಅವಗಾಹನೆಗೆ ತರಲಾಗಿತ್ತೆಂದೂ ವರದಿಯಾಗಿದೆ.

ಹೀಗೆ ಈ ದುರಂತದಲ್ಲಿ ಮೃತರಾದವರಲ್ಲಿ ಶ್ರೀನಿವಾಸ ಮುತ್ತು ಮತ್ತು ಚಂಪಾ ಎಂಬವರು ಗೇರುಬೀಜ ಮಜೂರ ಸಂಘದ ಸದಸ್ಯರಾಗಿದ್ದರು.

ದ. ಕ. ಬೀಡಿ ಮಜೂರರ ಪ್ರತಿನಿಧಿ ಸಭೆ

ಮಂಗಳೂರು ನಗರದ ಬೀಡಿ ಮಜೂರರ ಪ್ರತಿನಿಧಿ ಸಭೆಯೊಂದು ತಾರೀಖು 13—7—58ನೇ ಆದಿತ್ಯವಾರ ದಿನ ಶ್ರೀ ಮೋನಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು.

ಬೀಡಿ ಮಜೂರರ ಮೂಲ ಕೇಳಿಕೆಗಳಾದ ಸಾವಿರ ಬೀಡಿಗೆ ರೂ. 2-00 ಕನಿಷ್ಟ ಕೂಲಿ ನಿಶ್ಚಯಿಸಬೇಕು, ಬೀಡಿ ಮಜೂರರ ಹಿತರಕ್ಷಿಸುವ ಕಾನೂನು ರಚಿಸಬೇಕೆಂಬುದರ ಬಗ್ಗೆ ಮೈಸೂರು ಸರಕಾರವು ಈವರೆಗೆ ಯಾವೊಂದು ಕ್ರಮವನ್ನೂ ಕೈಕೊಳ್ಳದಿರುವುದನ್ನು ಮತ್ತು ಈ ಕೇಳಿಕೆಗಳನ್ನು ಪಡೆಯುವ ಬಗ್ಗೆ ಸಂಘಟನೆ ಮತ್ತು ಚಳವಳಿಯನ್ನು ಬೆಳೆಸುವ ಕುರಿತು ಕಾರ್ಯದರ್ಶಿಯವರು ಕೆಲವು ಸೂಚನೆಗಳನ್ನೊಳಗೊಂಡ ವರದಿಯನ್ನು ಸಭೆಯ ಮುಂದಿಟ್ಟರು. ಈ ಬಗ್ಗೆ ಪ್ರತಿನಿಧಿಗಳು ಚರ್ಚೆ ನಡೆಸಿ ಸರಕಾರಕ್ಕೆ ಮನವಿಯೊಪ್ಪಿಸಲು ಮಜೂರರ ಸಾಮೂಹಿಕ ಸಹಿ ಸಂಗ್ರಹಿಸುವ ನಿರ್ಣಯವನ್ನು ಕೈಕೊಳ್ಳಲಾಯ್ತು.

ಅಧ್ಯಕ್ಷರು ಸಭೆಯ ಮುಂದಿರಿಸಿದ—

1. ಮನೆಗಳಲ್ಲಿ ದುಡಿಯುವ ಮಜೂರರಿಂದ ಲೈಸೆನ್ಸ್‌ಫೀಸ್ ವಸೂಲು ಮಾಡುವ ಮುನ್ಸಿಪಾಲಿಟಿಯ ನೀತಿಯನ್ನು ವಿರೋಧಿಸುವ 2. ಕಡಿಮೆ ಬೆಲೆಗೆ ಅಕ್ಕಿ ಒದಗಿಸಿ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ 3. ಬೀಡಿ ಕೈಗಾರಿಕೆಯಲ್ಲಿ ದುಡಿಯುವ ಬೀಡಿ ಮಜೂರರಿಗೆ ಕನಿಷ್ಟ ಕೂಲಿ ನಿರ್ಣಯಿಸುವ ಬಗ್ಗೆ ಮೈಸೂರು, ಮದ್ರಾಸ್ ಮತ್ತು ಕೇರಳ ಪ್ರಾಂತ್ಯಗಳ ಮಜೂರ ಮಂತ್ರಿಗಳ ಸಭೆ ಬೇಗನೇ ಸೇರಬೇಕೆಂದು ಒತ್ತಾಯಿಸುವ ಮತ್ತು ತಣ್ಣೀರು ಬಾವಿಯ ಪಿ.ವಿ.ಎಸ್. ಬೀಡಿ ಕಂಟ್ರಾಕ್ಟರ್ ಅಹಮ್ಮದ್‌ಬಾವು ಮಜೂರನೊಬ್ಬನಿಗೆ ಹೊಡೆದುದನ್ನು ಪ್ರತಿಭಟಿಸುವ ಠರಾವುಗಳನ್ನು ಸ್ವೀಕರಿಸಲಾಯ್ತು. ಸಭೆಯಲ್ಲಿ ಭಾಷಣ ಮಾಡಿದ ಶ್ರೀ ಶಾಂತಾರಾಂ ಪೈಯವರು ಬೀಡಿ ಕೈಗಾರಿಕೆಯ ಬಗ್ಗೆ ಮದ್ರಾಸ್, ಕೇರಳ ಸರಕಾರಗಳು ಕೈಕೊಂಡಿರುವ ಕ್ರಮಗಳನ್ನು ವಿವರಿಸಿ ಮೈಸೂರು ಸರಕಾರವನ್ನು ಒತ್ತಾಯಿಸುವ ಚಳವಳಿಗಳನ್ನು ನಡೆಸಬೇಕೆಂದು ಕೇಳಿಕೊಂಡರು. ಅಧ್ಯಕ್ಷರ ಸಮಾರೋಪ ಭಾಷಣದ ನಂತರ ಸಭೆಯು ಕೊನೆಗೊಂಡಿತು.

ಉಡುಪಿ ತಾಲೂಕು ಬೀಡಿ ಮಜೂರರ ಪ್ರತಿನಿಧಿ ಸಭೆ

ತಾ. 6-7-1958ರಂದು ಉಡುಪಿ ತಾಲೂಕು ಬೀಡಿ ಮಜೂರರ ಪ್ರತಿನಿಧಿ

(೮ನೇ ಪುಟ ನೋಡಿ)

ಉಡುಪಿ ತಾಲ್ಲೂಕು ಬೀಡಿ ಮಜೂರರ ಪ್ರತಿನಿಧಿ ಸಭೆ

(೭ನೇ ಪುಟದಿಂದ)

ಸಮ್ಮೇಳನವು ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಮೋನಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಶಿರಿಬೀಡಿನಲ್ಲಿರುವ ಸಂಘದ ಆಫೀಸಿನಲ್ಲಿ ಜರುಗಿತು. ಸಭೆಗೆ ತಾಲೂಕಿನ 10 ಪ್ರದೇಶಗಳಿಂದ 40 ಮಂದಿ ಪ್ರತಿನಿಧಿಗಳು ಬಂದಿದ್ದರು.

ಸಂಘದ ಅಧ್ಯಕ್ಷರು ಗತವರ್ಷಗಳಲ್ಲಿ ನಡೆದ ಬೀಡಿ ಮಜೂರರ ಹೋರಾಟಗಳ, ಅವರ ಸಂಘಟನೆಯ ಕುರಿತು ವರದಿಯನ್ನು ಸಭೆಯ ಮುಂದಿಟ್ಟರು. ವರದಿಯ ಚರ್ಚೆಯಲ್ಲಿ ಶ್ರೀ ಯಂ. ಗೋಪಾಲ ಸುವರ್ಣ, ಕೆ. ದಾಮೋದರ, ಗುರುವ ಪೂಜಾರಿ ಮತ್ತು ಸೇಸಪ್ಪನವರು ಭಾಗವಹಿಸಿದ್ದರು. ಕೆಲವು ತಿದ್ದುಪಡಿಗಳೊಂದಿಗೆ ವರದಿಯನ್ನು ಅಂಗೀಕರಿಸಲಾಯ್ತು.

ನಂತರ ಬೀಡಿ ಕೈಗಾರಿಕೆಗೆ ಸರಕಾರವು ಒಡನೆ ಕಾನೂನನ್ನು ರಚಿಸಬೇಕೆಂದು ಕೇಳಿಕೊಳ್ಳುವ, ಕನಿಷ್ಠ ಕೂಲಿಯನ್ನು ನಿರ್ಣಯಿಸಬೇಕೆನ್ನುವ ಇಂದು ಇರುವ ಬೀಡಿ ಮಜೂರರ ಸಂಘಟನೆಯ ಶಕ್ತಿಯನ್ನು ಎರಡು ಪಾಲಷ್ಟು ಬೆಳಸಬೇಕೆನ್ನುವ ಠೀರ್ಮಾನಗಳಾದವು. ಮತ್ತು ಕಳೆದ 10 ವರ್ಷಗಳಿಂದ ಬೀಡಿ ಕೈಗಾರಿಕೆಯಲ್ಲಿ ಲಾಭಾಂಶವು ಹೆಚ್ಚುತ್ತಿರುವುದಾದರೂ ಈ 10 ವರ್ಷಗಳಲ್ಲಿ ಸ್ವಲ್ಪ ಕೂಡಾ ಮಜೂರಿಯನ್ನು ಹೆಚ್ಚಿಸದಿರುವ ನೀತಿಯ ಕುರಿತು ವಿಷಾದ ಸೂಚಿಸಿ, ಇಂದು ಸಿಗುತ್ತಿರುವ ಮಜೂರಿಗಿಂತ 1,000 ಬೀಡಿಗಳಿಗೆ 4 ಆಣೆ ಮಜೂರಿಯನ್ನು ಹೆಚ್ಚಿಸಬೇಕೆಂದು ಮ್ಯಾಲಕರನ್ನು ಕೇಳಿಕೊಳ್ಳುವ ನಿರ್ಣಯಗಳಾದವು.

ಬೀಡಿ ಮಜೂರರ ಪರಿಸ್ಥಿತಿ ಮತ್ತು ಅವರ ಸಂಘಟನೆಯ ಕುರಿತು ದ.ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಉಪಾಧ್ಯಕ್ಷರಾದ ಶ್ರೀ ಸಿಂಪ್ಸನ್ ಸೋನ್ಸರು ಮಾತಾಡಿದರು.

ಅಧ್ಯಕ್ಷರ ಭಾಷಣವಾದ ಬಳಿಕ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ನೇಕಾರ ಕೂಲಿಗಳು ಮತ್ತು ಮಾಲೀಕರ ಮಧ್ಯೆ ಒಪ್ಪಂದ

ಬೆಂಗಳೂರಿನ ಇಂಡಸ್ಟ್ರಿಯಲ್ ಟ್ರೈಬ್ಯೂನಲಿನ ನ್ಯಾಯಾಧೀಶರ ಮುಂದೆ ನೇಕಾರರ ಕೂಲಿ ಹೆಚ್ಚಳ ಮತ್ತು ಬೋನಸ್ಸು ಹಾಗೂ ಇತರ ಕೇಳಿಕೆಗಳ ಕುರಿತು ಮಜೂರ ಮಾಲಕ ಪ್ರತಿನಿಧಿಗಳು ಸೇರಿ ಚರ್ಚಿಸಿ, ಈ ಕೆಳಗಿನಂತೆ, ಒಂದು ಒಪ್ಪಂದ ಮಾಡಿಕೊಂಡಿರುತ್ತಾರೆ.

1. ಪ್ರಕೃತದಲ್ಲಿ ಚಾಲ್ತಿ ಇರುವ ಸೀರೆಗಳ ಮೇಲಿನ ಹೆಚ್ಚಿನ ಕೂಲಿಗಿಂತ ರೂಪಾಯಲ್ಲಿ ಹನ್ನೆರಡು ನಯಾ ಪೈಸೆ ಹೆಚ್ಚು ಕೂಡಿಸಿ ಮಾಲಕರು ಮಜೂರಿ ಸಲ್ಲಿಸಬೇಕು.

2. ಮಲಬಾರ್ ಮಾಲಿನ ಮೇಲೆ 40X40 ನಂಬ್ರದ ನೂಲಿನಿಂದ ತಯಾರಾಗುವ ಸರಕುಗಳ ಮೇಲೆ ರೂಪಾಯಿಯಲ್ಲಿ 10 ನಯೆ ಪೈಸೆ ಹೆಚ್ಚು ಸೇರಿಸಿ, ಮತ್ತು 40X32 ಯಾ ಕೆಳಗಿನ ನಂಬ್ರದ ನೂಲುಗಳ ಸರಕುಗಳ ಮೇಲೆ ರೂಪಾಯಿಯಲ್ಲಿ ಹನ್ನೆರಡು ನಯೆ ಪೈಸೆ ಹೆಚ್ಚು ಸೇರಿಸಿ ಮತ್ತು ಇವುಗಳಿಗಿಂತ ಮೇಲಿನ ನಂಬ್ರದ ನೂಲಿನಿಂದ ನೇಯಲ್ಪಡುವ ಮ್ಹಾಲುಗಳಲ್ಲಿ ರೂಪಾಯಿಯಲ್ಲಿ ಒಂಬತ್ತು ನಯೆ ಪೈಸೆ ಹೆಚ್ಚು ಕೂಡಿಸಿ ಮಾಲಕರು ಮಜೂರಿ ಸಲ್ಲಿಸಬೇಕು.

3. ಇವುಗಳ ಹೊರತು ಕೆಲವೊಂದು ವಿಶಿಷ್ಟ ಮ್ಹಾಲುಗಳಿಗೆ ಪ್ರತ್ಯೇಕವಾದ ಮಜೂರಿ ದರಗಳನ್ನು ಮಾಲಕರು ತೆರಬೇಕು.

ಮೇಲೆ ವಿವರಿಸಿದಂತೆ ನೇಕಾರರ ಮತ್ತು ನಳ್ಳಿ ಸುತ್ತುವವರ ಹೆಚ್ಚಿಸಿದ ಹೊಸ ಮಜೂರಿ ದರಗಳ ಒಂದು ಪಟ್ಟಿತಯಾರಿಸಿದ್ದು ಅದರಲ್ಲಿ ಸ್ಪಷ್ಟವಾಗಿ ನಮೂದಿಸಲ್ಪಟ್ಟಿರುವ ಮಜೂರಿ ದರಗಳು ತಾರೀಖು 7—7--58ರಿಂದ ಜ್ಯಾರಿಗೆ ಬರತಕ್ಕದ್ದು.

ಬೋನಸ್ಸಿನ ಕುರಿತು ಆ ವರ್ಷದ ಬಗ್ಗೆ ಎಲ್ಲ ಮಜೂರರಿಗೆ ಕೊಡುವಂತೆ ಒಪ್ಪಂದವಾಯಿತು.

——

ಬೆಂಗಳೂರು—

ಕಲ್ಲುಕುಟಿಗರ ಸಂಘದ ಸ್ಥಾಪನೆ

ದಾಸರಹಳ್ಳಿಯಲ್ಲಿ ಬಂಡೆ ಒಡೆಯುವ ಕೆಲಸಗಾರರ ಮತ್ತಿತರರ ಸಂಬಧಿಸಿದ ಕೆಲಸಗಾರರ ಕಷ್ಟಗಳನ್ನು ನಿವಾರಣೆ ಮಾಡಿಕೊಳ್ಳುವ ಸಂಘವನ್ನು ಸ್ಥಾಪಿಸುವುದಕ್ಕಾಗಿ ಸದರಿ ಕೆಲಸಗಾರರ ಸಭೆಯು ದಾಸರಹಳ್ಳಿ ಶ್ರೀ ರಾಜಣ್ಣನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಕಾರ್ಮಿಕ ಮುಖಂಡರಾದ ರಂಗರಾರ್ಜ ಮತ್ತು ಯು. ಎಸ್. ವೆಂಕಟರಾಮನ್‌ರವರುಗಳು ಸಂಘದ ಅವಶ್ಯಕತೆಯನ್ನು ಕುರಿತು ಮಾತನಾಡಿದರು. ನಂತರ ಬೆಂಗಳೂರು ಉತ್ತರ ತಾಲ್ಲೂಕು ಕಲ್ಲುಕುಟಿಗರ ಮತ್ತು ಗೃಹನಿರ್ಮಾಣ ಕೆಲಸಗಾರರ ಸಂಘವನ್ನು ರಚಿಸಬೇಕೆಂದು ಠೀರ್ಮಾನಿಸಲಾಯಿತು. ಮತ್ತು ಕೆಳಕಂಡ ಅಧಿಕಾರಿಗಳನ್ನು ಚುನಾಯಿಸಲಾಯಿತು. ಶ್ರೀಗಳಾದ ರಂಗರಾರ್ಜ ಅಧ್ಯಕ್ಷ, ಆರ್. ಕರುಪಯ್ಯ ಉಪಾಧ್ಯಕ್ಷ, ಯು. ಎಸ್. ವೆಂಕಟರಾಮನ್ ಕಾರ್ಯದರ್ಶಿ, ಅಮಾಸಪ್ಪ ಉಪಕಾರ್ಯದರ್ಶಿ, ದಾಸರಹಳ್ಳಿ ರಾಜಣ್ಣ ಖಜಾಂಚಿ ಮತ್ತು 14 ಸದಸ್ಯರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಮೈಸೂರಿನಲ್ಲಿ—

ಕೇರಳದ ವಿದ್ಯಾ ಮಂತ್ರಿ ಕಾ॥ ಜೋಸೆಫ್ ಮುಂಡಸ್ಸೆರಿ

ತಾ. 15—7—58ರಂದು ಮೈಸೂರಿನ ಸಹಕಾರ ಭವನದಲ್ಲಿ ಕೇರಳ ರಾಜ್ಯದ ಶಿಕ್ಷಣ ಸಚಿವ ಶ್ರೀ ಜೋಸೆಫ್ ಮುಂಡಸ್ಸೆರಿ ಅವರು ಕೇರಳದ ವಿದ್ಯಾಭ್ಯಾಸ ಮಸೂದೆಯ ವಿಚಾರವಾಗಿ ಭಾಷಣ ಮಾಡಿದರು. ತಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ, ಭೂ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಕೈಗೊಳ್ಳುತ್ತಿರುವ ಕ್ರಮಗಳನ್ನು ವಿವರಿಸಿದರು. ಮತ್ತು ತಮ್ಮ ಆಡಳಿತದಲ್ಲಿ ರಾಜ್ಯಾಂಗ ಘಟನೆಯ ಚೌಕಟ್ಟಿನಲ್ಲಿ ಪಾರ್ಲಿಮೆಂಟರಿ ಪ್ರಯೋಗವು ಹೇಗೆ ನಡೆಯಬೇಕಾಗಿದೆ ಎಂದು ಇತರ ಪಕ್ಷಗಳ ಧೋರಣೆಯೊಡನೆ ಹೋಲಿಸಿ ವಿವರಿಸಿದರು.

ದಾವಣಗೆರೆ ಪುರಜನರ ವಿಜಯ

ದಾವಣಗೆರೆಯಲ್ಲಿ 1946ರಿಂದ ಪ್ರಾರಂಭಿಸಲ್ಪಟ್ಟಿರುವ ಡಿ. ಆರ್. ಎಂ. ಕಾಲೇಜನ್ನು ಪ್ರಥಮ ದರ್ಜೆಯ ಕಾಲೇಜನ್ನಾಗಿ ಮಾಡಬೇಕೆಂದು ಸರಕಾರವನ್ನು ಒತ್ತಾಯಪಡಿಸಲು ವಿದ್ಯಾರ್ಥಿಗಳು, ಪುರಜನರು ಜುಲೈ 9ರಂದು ಮತ್ತು ನಂತರ ನಡೆಸಿದ ಹರತಾಳ ಪ್ರದರ್ಶನಗಳು ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಸರಕಾರವು ಜುಲೈ 11ರಂದು ಬೇಡಿಕೆಯನ್ನು ಮಂಡಿಸಿ, ಕಾಲೇಜನ್ನು ಪ್ರಥಮ ದರ್ಜೆ ಕಾಲೇಜಿನ ಶ್ರೇಣಿಗೆ ಪರಿವರ್ತಿಸಲು ಠೀರ್ಮಾನಿಸಿದೆ.

ದಾವಣಗೆರೆಯು ದಿನೇ ದಿನೇ ಬೆಳೆಯುತ್ತಿದ್ದು ಅಲ್ಲಿ ಕಾಲೇಜಿನ ಅವಶ್ಯಕತೆ ಅರಿತು 1946ರಲ್ಲಿ ಡಿ.ಆರ್.ಎಂ. ಕಾಲೇಜ್ ಸ್ಥಾಪಿತವಾಯಿತು. ಕಳೆದ ಎರಡು ವರ್ಷಗಳಿಂದಲೂ ಅಲ್ಲಿನ ವಿದ್ಯಾರ್ಥಿಗಳು, ಪುರಜನರು ಅದನ್ನು ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿಸಬೇಕೆಂದು ಬೇಡಿಕೆ ಮಂಡಿಸಿದ್ದರು. ದಾವಣಗೆರೆಯಲ್ಲಿ ಇಂಟರ್ ಪಾಸು ಮಾಡಿದ ವಿದ್ಯಾರ್ಥಿಗಳು, ಶಿವಮೊಗ್ಗ ಅಥವ ಚಿತ್ರದುರ್ಗ ಅಥವ ಬೆಂಗಳೂರಿಗೆ ಮುಂದಿನ ವ್ಯಾಸಂಗಕ್ಕಾಗಿ ಬರಬೇಕಾಗಿದ್ದಿತು. ಈ ವರ್ಷದಿಂದ ಪ್ರಿಯೂನಿವರ್ಸಿಟಿ ಕೋರ್ಸ್ ಒಂದು, ಮೂರು ವರ್ಷದ ಡಿಗ್ರಿ ಶಿಕ್ಷಣ ಆರಂಭವಾದ್ದರಿಂದಾಗಿ, ಪ್ರಥಮ ದರ್ಜೆ ಕಾಲೇಜು ದಾವಣಗೆರೆಯಲ್ಲಿ ಸ್ಥಾಪಿತವಾಗುವುದು ಅವಶ್ಯವಾಗಿತ್ತು. ಸರಕಾರಕ್ಕೆ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಸಲ್ಲಿಸಿದ ಮನವಿಗಳೆಲ್ಲವೂ ವ್ಯರ್ಥವಾದುವು. ಸರಕಾರ ಕಿವಿಗೊಟ್ಟದ್ದು, ವಿದ್ಯಾರ್ಥಿಗಳೂ ಪುರಜನರೂ ಒಂದಾಗಿ ಹರತಾಳವನ್ನಾಚರಿಸಿದ ಮೇಲೆಯೇ. ವಿದ್ಯಾಭ್ಯಾಸಕ್ಕಾಗಿ ಕಾಲೇಜನ್ನು ಪಡೆಯಲು ಸಹ ಇಂದು ಜನತೆ ಮುಷ್ಕರ ನಡೆಸಬೇಕಾಗಿದೆ.

ಚಿಕ್ಕಮಗಳೂರು ಕಾರ್ಮಿಕರ ವಾರ್ಷಿಕ ಮಹಾಸಭೆ

ಚಿಕ್ಕಮಗಳೂರು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ ಪ್ರಥಮ ವಾರ್ಷಿಕ ಸಭೆ ತಾ. 13-7-58ರಂದು ಸೇರಿತ್ತು. ಸಭೆಯ ಅಧ್ಯಕ್ಷತೆಯನ್ನು ಯಂ. ವಿ. ಭಾಸ್ಕರ್‌ರವರು ವಹಿಸಿದ್ದರು.

ಪ್ರಥಮವಾಗಿ ಕಾರ್ಯದರ್ಶಿ ಬಿ. ವೀರಣ್ಣನವರು ಸಭೆಯಲ್ಲಿ ಸಂಘದ ಚಟುವಟಿಕೆಗಳ ಬಗ್ಗೆ ಒಪ್ಪಿಸಿದ ವರದಿಯನ್ನು ಚರ್ಚೆಯಾದ ನಂತರ ಸಭೆಯು ಅಂಗೀಕರಿಸಿತು. ನಂತರ ಹೊಸದಾಗಿ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಶ್ರೀ ದಿನಕರ್ ರಾವ್ (ಬಿ. ಎ. ಬಿ. ಎಲ್.ಎಲ್. ಬಿ., ವಕೀಲ್) ಇವರನ್ನು ಅಧ್ಯಕ್ಷರನ್ನಾಗಿಯೂ, ಕೆ. ಸಿ. ಸಿದ್ದಪ್ಪ ಮತ್ತು ಯಂ. ವಿ. ಭಾಸ್ಕರ್ ಇವರನ್ನು ಉಪಾಧ್ಯಕ್ಷರನ್ನಾಗಿಯೂ, ಬಿ. ವೀರಣ್ಣನವರನ್ನು ಕಾರ್ಯದರ್ಶಿಯಾಗಿಯೂ, ಎಸ್. ಸುಸೇರಾಜ್ ಸಹಕಾರ್ಯದರ್ಶಿಯನ್ನಾಗಿಯೂ, ಯಂ. ವಿ. ಸುಬ್ಬಯ್ಯ ಅವರನ್ನು ಖಜಾಂಚಿಯಾಗಿಯೂ ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಹೆಚ್. ಹೆಚ್. ಕುಮಾರಸ್ವಾಮಿ, ಅಬ್ದುಲ್ ಜಬ್ಬಾರ್, ಬಷೀರ್ ಅಹ್ಮದ್, ಅಮೀರ್ ಜಾನ್, ಉರುಫ್, ಖಲಿಂದರ್ ಖಾನ್ ಇಮಾಮ್ ಬೇಗ್‌ರನ್ನು ಚುನಾಯಿಸಲಾಯಿತು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಣಿಜ್ಯ ಉದ್ಯಮಗಳಲ್ಲಿ ದುಡಿಯುವ ಸಾವಿರಾರು ಮಂದಿ ಕಾರ್ಮಿಕರು ಯಾವ ಸವಲತ್ತುಗಳು ಇಲ್ಲದೆ ದುಡಿಯಬೇಕಾಗಿದೆ. ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ಶಾಪ್ ಆ್ಯಕ್ಟನ್ನು ಸರಕಾರವು ಜಾರಿಗೊಳಿಸುವುದರ ಮೂಲಕ ಈ ಪರಿಸ್ಥಿತಿಯನ್ನು ತಪ್ಪಿಸಲು ಸಾಧ್ಯವಿದೆಯೆಂದು ಈ ಸಭೆಯು ಭಾವಿಸುತ್ತದೆ. ಆದುದರಿಂದ ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ಕೂಡಲೇ ಶಾಪ್ ಆ್ಯಕ್ಟನ್ನು ಜಾರಿಗೆ ತರಬೇಕೆಂದು ಸರಕಾರವನ್ನು ಒತ್ತಾಯಪಡಿಸುತ್ತದೆ.

ಷಾಪ್ ಆಕ್ಟ್ ಜಾರಿಯಾಗಲಿ

ಚಿಕ್ಕಮಗಳೂರು ಶ್ರೀ ಗುರುನಾಥ ಥಿಯೇಟರಿನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಪೈಕಿ ಐದು ಮಂದಿ ಕೆಲಸಗಾರರನ್ನು ವಜಾ ಮಾಡಿದ ಬಗ್ಗೆ ಉದ್ಭವಿಸಿದ ವಿವಾದವನ್ನು ಇನ್ನೂ ಸರಕಾರ ಕೈಗಾರಿಕಾ ಕೋರ್ಟಿಗೆ ಒಪ್ಪಿಸದೆ ಇರುವುದರ ಬಗ್ಗೆ ಈ ಸಭೆಯು ತನ್ನ ವಿಷಾದವನ್ನು ವ್ಯಕ್ತಪಡಿಸುತ್ತದೆ. ಅಂತೆಯೇ ಎಚ್. ವಿ. ಆರ್. ಇಂಜಿನೀಯರಿಂಗ್ ವರ್ಕ್ಸ್‌ನಲ್ಲಿ ದುಡಿಯುತ್ತಿರುವ ಅಮೀರ್ ಜಾನ್, ಉರುಫ್ ಖಲಂದರ್ ಖಾನ್ ಇವರ ವಿವಾದವನ್ನು ಕೂಡಲೇ ಸರಕಾರ ಕೈಗಾರಿಕಾ ಕೋರ್ಟಿಗೆ ಒಪ್ಪಿಸಬೇಕೆಂದೂ ಈ ಸಭೆಯು ಬಲವಂತಪಡಿಸುತ್ತದೆ.

ಸಂಪಾದಕರಿಗೆ ಪತ್ರಗಳು

ಅಮೃತ್‌ಮಹಲ್ ಕಾವಲು ಭೂಮಿ

ಹಾಸನ ಜಿಲ್ಲೆಯ ಅಮೃತಮಹಲ್ ಕಾವಲನ್ನು ಖುಲಾಸೆ ಮಾಡಿ ರೆವಿನ್ಯೂ ಇಲಾಖೆಗೆ ವಹಿಸುತ್ತಾರೆ. ಸರ್ವೆ ಇಲಾಖೆಯವರು ಬಂದು ಅಳತೆ ಮಾಡಿ ಸರಹದ್ದು ನಿರ್ಣಯ ಮಾಡಿ ಕಲ್ಲುಗಳನ್ನು ನೆಡಬೇಕು. ಹಾಸನ ಜಿಲ್ಲೆಯ ಜಾವಗಲ್ ಹೋಬಳಿ ಬೂಚಿನ ಹಳ್ಳಿ ಕಾವಲು ವಿಚಾರದಲ್ಲಿ ಅನೇಕ ಜನ ಬಡರೈತರು ನೂತನ ಗ್ರಾಮವನ್ನು ನಿರ್ಮಾಣ ಮಾಡುತ್ತೇವೆ. "ನಮಗೆ ಜಮೀನು ಕೊಡಬೇಕೆಂದು ಮೆಹರ್‌ಬಾನ್ ರೆವಿನ್ಯೂ ಮಂತ್ರಿಗಳಿಗೂ ಜಿಲ್ಲಾಧಿಕಾರಿಗಳಿಗೂ ಸಬ್‌ಡಿವಿಜನ್ ಸಾಹೇಬರವರಿಗೂ ಅರ್ಜಿಕೊಟ್ಟಿರುತ್ತಾರೆ. ಈ ತಹಲ್‌ವರೆವಿಗೂ ಈ ವಿಚಾರದಲ್ಲಿ ಯಾವ ಕ್ರಮವೂ ಜರುಗಿರುವದಿಲ್ಲ. ಅನೇಕ ತಗಾದೆ ಬರೆದರೂ ಪ್ರಯೋಜನವಾಗಿಲ್ಲ. ಕೊಟ್ಟ ಅರ್ಜಿಗಳಿಗೆ ಇಂಡಾರ್ಸ್‌ಮೆಂಟ್ ಬಂದಿಲ್ಲ. ಹಳೆಬೀಡು ಹೋಬಳಿ ಕಲ್ಲಹಳ್ಳಿ ಕಾವಲು ವಿಚಾರವು ಇದೆ ರೀತಿಯಾಗಿರುತ್ತೆ. ಕಛೇರಿಗಳಲ್ಲಿ ಮೂರು ತಿಂಗಳಿಗಿಂತ ಹೆಚ್ಚು ಕಾಲ ರಿಕಾರ್ಡು ಪೆಂಡಿಂಗ್ ಇಡಕೂಡದೆಂದು ಸರ್ಕಾರಿ ಪ್ರಕಟನೆ ಮತ್ತು ಹುಕ್ಕುಂ ಆಗಿ ಅನೇಕ ವರುಷಗಳಾಗಿರುತ್ತೆ. ಆದರೆ ಇದು ನಾವು

(೯ನೇ ಪುಟ ನೋಡಿ)

"ಮೈಸೂರಿನಲ್ಲಿ ಮಧ್ಯಮವರ್ಗದವರೇ ಹೆಚ್ಚಾಗಿರುವದರಿಂದ ಮತ್ತು ಕಮ್ಯೂನಿಸ್ಟ್ ಪಕ್ಷವು ಅಷ್ಟೊಂದು ಪ್ರಬಲವಾಗಿಲ್ಲದುದರಿಂದ ಪಿ. ಎಸ್. ಪಿ.ಯವರೇ ಅಧಿಕಾರಕ್ಕೆ ಬರುವುದು ಖಂಡಿತ. ಪಿ.ಎಸ್. ಪಿ.ಯವರು ಅಧಿಕಾರಕ್ಕೆ ಬರಲು ಅನುಕೂಲವಾಗಿರುವ ಪರಿಸ್ಥಿತಿ ಮೈಸೂರನ್ನುಳಿದು ಬೇರೆಲ್ಲೂ ಇಲ್ಲ" ಎಂದು ಪೀಯಸ್‌ಪೀ ನಾಯಕರೊಬ್ಬರು ಇತ್ತೀಚೆಗೆ ಪೀಪೀ ಊದಿದ್ದಾರೆ.

ಹಾಗಾದರೆ ಇವರು ಅಧಿಕಾರಕ್ಕೆ ಬಂದ ಒಂದೇ ವರುಷದಲ್ಲಿ ಕಮ್ಯೂನಿಸ್ಟರೇ ಅಧಿಕಾರ ವಹಿಸಿಕೊಳ್ಳುವದೂ ಶತಸ್ಸಿದ್ಧವೆಂದು ಒಪ್ಪಿಕೊಂಡಂತಾಯಿತಲ್ಲವೆ ಈ ಪೀಪೀ ನಾಯಕರು ?

ಯಾಕೆಂದರೆ ಕಾಂಗ್ರೆಸ್ ಕುಪ್ಪಳಿಸಿದಲ್ಲಿ ಪಿ. ಎಸ್. ಪಿ. ಒಮ್ಮೆಯೂ ಒಂದು ಕಡೆಗೂ ಯಶಸ್ವೀ ರಾಜ್ಯಕಾರ್ಯಭಾರ ನಡೆಸಿದ ದೃಷ್ಟಾಂತ ಈ ವರೆಗೂ ದೊರೆಯಲಿಲ್ಲ. ಪಕ್ಕದ ಕೇರಳವೇ ಇದಕ್ಕೆ ತಕ್ಕ ನಿದರ್ಶನ. ಈಗ ಕೇರಳದ ಪಕ್ಕದಲ್ಲೇ ಇರುವ ಮೈಸೂರಿನಲ್ಲಿ ಇದು ಮತ್ತೊಂದು ನಿದರ್ಶನವಾಗುತ್ತದೆ ಎಂದು ರಾಜಕೀಯ ಹೋರಾಟ ರತ್ನರೊಬ್ಬರ ಅಭಿಪ್ರಾಯ.

o o o

"ನೀನು ಕಮ್ಯೂನಿಸ್ಟನೆ ?" - ಎಂದು ಉದ್ಯೋಗಾರ್ಥಿ ಉಮೇದುವಾರನೊಬ್ಬನನ್ನು 'ಇಂಟರ್‌ವ್ಯೂ' ಕಾಲಕ್ಕೆ ಕೇಳಲಾಯಿತಂತೆ. ಕಮ್ಯೂನಿಸ್ಟನಾಗಿದ್ದರೆ ಇವನಿಗೆ ಕೆಲಸವಿಲ್ಲ.

ನೀನು ಕಾಂಗ್ರೆಸ್ಸಿಗನೆ ? ಪಿ.ಎಸ್.ಪಿ. ಪಿ ಯವನೆ ? ಎಂದು ಯಾರನ್ನೂ ಕೇಳುವದಿಲ್ಲವಂತೆ.

-ಹಿಂದುಳಿದವರಿಗೇ (Backward) ವಿಶೇಷ ಉದ್ಯೋಗವಕಾಶವನ್ನು ಕಲ್ಪಿಸಿಕೊಡುತ್ತಿರುವ ಸರಕಾರಕ್ಕೆ ಅಭಿನಂದನೆಗಳು ಎಂದು ವಾರ್ಡ್ ಕಾಂಗ್ರೆಸ್ ಪುಢಾರಿಗಳೊಬ್ಬರು ಅಭಿಪ್ರಾಯಪಟ್ಟರಂತೆ.

o o o

'ಕಮ್ಯೂನಿಸ್ಟರು ಕಾಂಗ್ರೆಸ್ ಮತ್ತಿನ್ನಿತರರಿಗಿಂತ ಮುಂದುವರೆದವರು' ಎಂಬುದನ್ನು ಈ ರೀತಿಯಲ್ಲಿ ಒಪ್ಪಿಕೊಳ್ಳುವ ಕಾಂಗ್ರೆಸ್ ರಾಜ್ಯದಲ್ಲಿಯ ಹೊಸ ಜಾತಿಗಳ ವಿಷಯವಾಗಿ ರಾಜಾಜಿ ಇತ್ತೀಚೆಗೆ ಮಾತನಾಡಿದುದನ್ನು ನೀವು ಕೂಡಾ ಯಾರೂ ಮರೆತಿರಲಿಕ್ಕಿಲ್ಲ.

ಕಮ್ಯೂನಿಸ್ಟ್ ಇ. ಎಂ. ಎಸ್.ರೊಡನೆ ಒಂದೇ ವೇದಿಕೆಯ ಮೇಲೆ ರಾಜಾಜಿ ಮಾತನಾಡಿದಾಗ ದೇಶಾದ್ಯಂತ ಟೀಕಿಸಲಾಯಿತು. ಆಗ ರಾಜಾಜಿಯವರು "ನಮ್ಮ ದೇಶದಲ್ಲಿ ಹೊಸ ರಾಜಕೀಯ ಜಾತಿಗಳನ್ನು ಹುಟ್ಟಿಸಲಾಗುತ್ತಿದೆ. ಇದನ್ನು ಖಂಡಿಸಬೇಕು, ಎದುರಿಸಬೇಕು" ಎಂದೂ ಅಂದರು.

'ಪಕ್ಷೀಯ' ಮತ್ತು ಪಕ್ಷಾತೀತ ನಿರುದ್ಯೋಗಿ ಜಾತಿಯವರೆಲ್ಲ ಇದನ್ನು ಅನುಮೋದಿಸುತ್ತಾರೆಂದು ನಾವು ಭಾವಿಸುತ್ತೇವೆ.

o o o

ಭಾರತದ ರಾಷ್ಟ್ರಾಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರು ಆಶ್ರಯದಾತರಾಗಿರುವ ಕಲಕತ್ತಾ ಕ್ಲಬ್ ಲಿಮಿಟೆಡ್ಡಿಗೆ 1957ನೇ ಸಾಲಿನಲ್ಲಿ ಕಾಫೀ ಬಾಬ್ತು ರೂ. 1,905 ನಷ್ಟವಾಗಿವೆಯಂತೆ.

ಕಾಂಗ್ರೆಸ್ಸಿನವರು ನಿರ್ಮಿಸುತ್ತಿರುವ ಸಮೃದ್ಧ ರಾಷ್ಟ್ರದ ರಾಷ್ಟ್ರಾಧ್ಯಕ್ಷರು ಸ್ವತಃ ಆಶ್ರಯದಾತರಾಗಿರುವ ಶ್ರೀಮಂತ ಸುಖಜೀವಿಗಳ ಕ್ಲಬ್ಬಿಗೆ ನಷ್ಟವಾಗಿರುವದು 'ಅಯ್ಯೋ ಪಾಪ' ಎನ್ನುವಂಥಾದ್ದಾಗಿದೆಯೆಂದು ಬೆಂಗಳೂರಿನ ಒಂದಾಣೆ ಕಾಫಿಗ್ಲಾಸಿನ ಮಾಲೀಕರೊಬ್ಬರು ಮರುಕಪಟ್ಟರಂತೆ.

ಹುರಿಗಾಳು

ಸದರೀ ಕ್ಲಬ್ಬಿಗೆ ಮದ್ಯ ಮತ್ತು ಸಿಗರೇಟುಗಳ ಲೆಕ್ಕವು ಈ ಸಲ ರೂಪಾಯಿಗಳು 1,03,746ಗಳ ಹೆಚ್ಚಳವನ್ನು ತೋರಿಸಿದೆಯಂತೆ.

ಇನ್ನು ಹೋಟೆಲುಗಳೂ, ಕ್ಲಬ್ಬುಗಳೂ ಎಲ್ಲಾ ಮದ್ಯದಂಗಡಿಗಳೇ ಆಗುವವೋ ಏನೋ ಎಂಬ ಸ್ಪರ್ಧಾತ್ಮಕ ಭೀತಿ ಕಲಾಸಿಪಾಳ್ಯಂ ಬಸ್‌ಸ್ಟಾಂಡ್ ಪ್ರದೇಶದಲ್ಲಿ ವ್ಯಾಪಿಸಿದ ಬಗ್ಗೆ ಇನ್ನೂ ಖಚಿತ ವರದಿಗಳು ದೊರೆತಿಲ್ಲ.

o o o

ಪಾನನಿರೋಧ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿದ್ದ, 1952ರಿಂದ 1957ರ ವರೆಗೆ ಪಾರ್ಲಿಮೆಂಟ್ ಸದಸ್ಯರಾಗಿದ್ದ, ಮತ್ತು ಖಾದೀ ಹಾಗೂ ಗ್ರಾಮೋದ್ಯೋಗ ಸಮಿತಿಯ ಅಧ್ಯಕ್ಷರಾಗಿರುವ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರನ್ನು ಇದೀಗ ಯೋಜನಾ ಸಮಿತಿಯ ಸದಸ್ಯರನ್ನಾಗಿ ನಿಯಮಿಸಿಕೊಳ್ಳಲಾಯಿತಂತೆ.

"ನಮೋನ್ನಮಃ ಶ್ರೀಮನ್ನಾರಾಯಣ, ನೀನೇ ಗತಿ ನಮ್ಮ ಯೋಜನೆಗಳಿಗೆ" !

o o o

ದಿನದಿನಕ್ಕೂ ಕುಸಿದು ಕುಪ್ಪಳಿಸುತ್ತಿರುವ ಕಾಂಗ್ರೆಸ್ ಮಹಾವೃಕ್ಷವನ್ನು ಒಂದಿಷ್ಟು ನೇರವಾಗಿ ನಿಲ್ಲಿಸಲು ಮಹಾ ಪ್ರಯತ್ನಗಳು ನಡೆಯುತ್ತಲೇ ಇವೆ. ಅದಕ್ಕಾಗಿ ಕಾಂಗ್ರೆಸ್ ಅಧ್ಯಕ್ಷ ಢೇಬರ್ ಭಾಯಿ ಕಾಂಗ್ರೆಸ್ ಕಾರ್ಯಕರ್ತರೆದುರು ಮೊದಲು ಹನ್ನೊಂದು ಅಂಶಗಳ ಯೋಜನೆಯನ್ನು ಮಂಡಿಸಿದರು. ನಂತರ ಇದು 7 ಅಂಶಗಳಿಗಿಳಿಯಿತು, ಇದೀಗ 5 ಅಂಶಗಳಿಗಿಳಿದಿದೆ.

—ಇನ್ನು ಮುಂದೆ ? 3 ಅಂಶಗಳಿಗೆ, ಆಮೇಲೆ 1 ಅಂಶಕ್ಕೆ. ಆ ಬಳಿಕ ? ತಡೀರಿ, ಕೊಂಚ ತಡೀರಿ, ಆ ಬಳಿಕ ಯಾವ ಅಂಕಿ ಇದೆಯೊ ನೋಡಿ ಹೇಳಲಿ ಢೇಬರ್ ಭಾಯಿ.

o o o

ಸಿನಾರ್ ಮೌರೋ ಬ್ಯಾರೆಸಿಸಿಯಾ ಅವರು ಮೆಕ್ಸಿಕೋದ (ಅಮೆರಿಕಾ) ಕೆಥೋಲಿಕ್ ಪತ್ರಿಕೆ 'ಲ್ಯಾಟಿನೊಅಮೆರಿಕಾ'ದಲ್ಲಿ 'ಸುತ್ತಿಗೆ ಕುಡುಗೋಲುಗಳೊಡನೆ ನಡೆಸಬೇಕಾದ ಕದನ'ದ ಬಗ್ಗೆ ರಚನಾತ್ಮಕ ಕಮ್ಯೂನಿಸಂ ,ವಿರೋಧಿ ಮೂರು ಕ್ರಮಗಳನ್ನು ಸೂಚಿಸಿದ್ದಾರಂತೆ. ವ್ಯಕ್ತಿ, ಸಮೂಹ, ಸರಕಾರ ಈ ಮಟ್ಟಗಳಲ್ಲಿ ನಡೆಯಬೇಕಾದ ಅವರ ಈ ಕಮ್ಯೂನಿಸ್ಟರ ನಾಶದ ಯೋಜನೆ ಅತ್ಯಂತ "ಕುಶಲ ಸೇನಾ ವ್ಯೂಹ" ಎಂದು ಅವರಿಂದಲೇ ವರ್ಣಿಸಲ್ಪಟ್ಟಿದೆ. ಹಾಗೇ ಅವರು ಕಮ್ಯೂನಿಸ್ಟ್ ವಿರೋಧಿ ಪ್ರತಿಗಾಮೀ ರಂಗಗಳಿಗೆಲ್ಲ ಮನವಿ ಮಾಡಿಕೊಳ್ಳುತ್ತ ಹೀಗೆ ಹೇಳಿದ್ದಾರೆ: **"ನಾವೆಲ್ಲಾ ಒಂದೇ ನೌಕೆಯಲ್ಲಿರುವೆವು, ಕಮ್ಯೂನಿಸಂ ಯಶಸ್ವಿಯಾದರೆ ನಾವೆಲ್ಲ ಮುಳುಗಿ ಹೋಗುತ್ತೇವೆ".**

ಮೇಲಿನ ಮೂರು ರಚನಾತ್ಮಕ ಕಮ್ಯೂನಿಸಂ ವಿರೋಧಿ ಕ್ರಮಗಳಿಂದ, ಕಾರ್ಯಾಚರಣೆಯಿಂದ ಈಗ 110 ವರುಷಗಳ ಹಿಂದಿನಿಂದ ಕಮ್ಯೂನಿಸಂನ್ನು ನಾಶ ಮಾಡುವಲ್ಲಿ ಅವರು ಯಶಸ್ವಿಗಳಾಗಲಿಲ್ಲ. ಆಗ ಲೀಗ್ ಆಫ್ ಕಮ್ಯೂನಿಸ್ಟ್ ಸಂಸ್ಥೆಗೆ ಕೇವಲ 200—300 ಜನ ಮಾತ್ರ ಸದಸ್ಯರಿದ್ದರು. ಎರಡನೆಯ ಜಾಗತಿಕ ಸಮರದ ಮೊದಲು ಕೇವಲ 43 ಕಮ್ಯೂನಿಸ್ಟ್ ಪಕ್ಷಗಳಿದ್ದು ನಾಲ್ಕು ಮಿಲಿಯ ಜನ ಸದಸ್ಯರಿದ್ದರು. ಸದ್ಯ 75 ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ್ ಪಕ್ಷಗಳಿದ್ದು 33 ಮಿಲಿಯ ಗಿಂತಲೂ ಹೆಚ್ಚು ಜನ ಸದಸ್ಯರಿರುವರು.

ಹಾಗಾದರೆ ಬ್ಯಾರೆಸಿಸಿಯಾರವರ "ಕುಶಲ ಸೇನಾವ್ಯೂಹ"ವು ಅವರೆಲ್ಲರೂ ಒಂದರಲ್ಲೇ ಇರುವ ನೌಕೆಯನ್ನು ರಕ್ಷಿಸುವುದು ಕಷ್ಟವೇ !

—"ಚೌಚೌವಾಲಾ"

ಸಂಪಾದಕರಿಗೆ ಪತ್ರಗಳು

(ಆನೇ ಪುಟದಿಂದ)

ಪಾತ್ರದ ಕಾಯಿದೆ ಆಗಿರುತ್ತೆ ವಿನಹಾ ಕಾರ್ಯಾಚರಣೆಯಾಗಿಲ್ಲ. ಈ ಪದ್ಧತಿ ಪೂರ್ಣವಾಗಿ ತಪ್ಪಿದರೆ ಬಡವರ ಆಹವಾಲು ಅದಷ್ಟು ಜಾಗ್ರತೆ ಈಡೇರುವದೆಂದು ನನ್ನ ಬೇಡಿಕೆ.

ಕ್ರೈತರ ಹಿತೈಷಿ, ಹಳೇಬೀಡು

ಪಾವಗಡದ ಮುನಿಸಿಪಲ್ ಹೈಸ್ಕೂಲನ್ನು ರಕ್ಷಿಸಿರಿ !

ತುಮಕೂರು ಜಿಲ್ಲೆಯ ಪಾವಗಡದಲ್ಲಿ ಮುನಿಸಿಪಲ್ ಹೈಸ್ಕೂಲು ಇದೆ. ಹಿಂದಿನ ಮುಖ್ಯೋಪಾಧ್ಯಾಯರಿದ್ದಾಗ ಶಾಲೆಯ ಶಿಸ್ತು ಮಾತ್ರ ಚೆನ್ನಾಗಿತ್ತೆಂಬುದು ಎಲ್ಲರಿಗೂ ತಿಳಿದ ವಿಷಯ. ಅಲ್ಲಿಂದೀಚೆಗೆ ಶಾಲೆಯು ಎಲ್ಲರ ಮೆಚ್ಚುಗೆಯನ್ನು ಕಳೆದುಕೊಳ್ಳುತ್ತಿದೆ ಎಂದು ಬಹಿರಂಗಪಡಿಸದೆ ವಿಧಿ ಇಲ್ಲ. ಇದಕ್ಕೆ ಮುಖ್ಯ ಕಾರಣರು ಉಪಾಧ್ಯಾಯರೇ ಎಂದೂ ಹೇಳದೆ ವಿಧಿಯಿಲ್ಲ.

ಉಪಾಧ್ಯಾಯರುಗಳಲ್ಲಿ ಅಂತಃಕಲಹಗಳು ತುಂಬಿಕೊಂಡಿದ್ದು ವಿದ್ಯಾರ್ಥಿಗಳಲ್ಲೂ ಕೋಮುವಾರು ಭಾವನೆಗಳನ್ನು ತುಂಬಿ ಹೈಸ್ಕೂಲು, ಕೆಳಗಿನಿಂದ ಮೇಲಿನವರೆಗೆ ಯಥಾ ರಾಜಾ ತಥಾ ಪ್ರಜಾ ಆಗಿದೆ. ವಿದ್ಯಾರ್ಥಿಗಳಿಗೆ ಸ್ಕೂಲಿನಲ್ಲಿ ಸರಿಯಾಗಿ ಪಾಠ ಮಾಡದೆ ಮನೆಗಳಲ್ಲಿ ಸಮ ಪಾಠಶಾಲೆಗಳನ್ನು ನಡೆಸಿಕೊಂಡು ಸಂಪಾದನೆಯ ಸವಿಯನ್ನು ಬೇರೆ ಕಂಡುಕೊಂಡಿದ್ದಾರೆ. ವಿದ್ಯಾರ್ಥಿಗಳ ಐಚ್ಛಿಕ ವಿಷಯದಲ್ಲಿ ಇಲ್ಲದ ಬಲವಂತ ನಡೆದಿದೆ. ಇಲ್ಲಿ ಇನ್ನೂ ಏನೇನೋ ನಡೆಯುತ್ತಿ. ಬಹಳ ಬರೆದರೆ ಪೇಪರಿನವರು ಪ್ರಕಟಿಸಲಿಕ್ಕಿಲ್ಲವೆಂದು ಅಲ್ಪವೇ ಬರೆಯಲಾಗಿದೆ. ವಿದ್ಯಾಶಾಖೆಯವರು ದಯವಿಟ್ಟು ಗಮನಿಸಿ ಅಧಃಪತನಕ್ಕಿಳಿಯುತ್ತಿರುವ ಈ ಶಾಲೆಯನ್ನು ಕಾಪಾಡಬೇಕೆಂದು ಪ್ರಾರ್ಥನೆ. ಆಲಸ್ಯವಾದಲ್ಲಿ ಪರಿಸ್ಥಿತಿ ಇನ್ನೂ ಹದಗೆಡುವುದು.

ಆರ್. ಎಸ್. ಎನ್. ರಾವ್
ಪಾವಗಡ

ವಿ. ಇ. ಎಸ್. ನಿಷ್ಪ್ರಯೋಜಕ

1958ನೆ ಜೂನ್ ಮಾಹೆ ಬೇಲೂರು ಮತ್ತು ಅರಸೀಕೆರೆ ತಾಲ್ಲೂಗಳ ವರದಿಯನ್ನು ಕಿಸಾನ್ ಸಭೆ ಹಾಸನ ಜಿಲ್ಲಾ ರೈತ ಸಂಘದ ಸಂಚಾಲಕರ ಮಾಹೆವಾರಿ ವಿವರ ಹೀಗಿದೆ: ಬೇಲೂರು ತಾಲ್ಲೂಕು ಮಾದಿಹಳ್ಳಿ ಹೋಬಳಿ ಚಿಟ್ಟದಾಲೂರಿನ ಪಾಠಶಾಲೆಯ ಬಾಗಿಲು ಹಾಕಿ ಎರಡು ತಿಂಗಳಾಗಿರುತ್ತೆ. ಉಪಾಧ್ಯಾಯರಿಲ್ಲದೆ ತೊಂದರೆ ಆಗಿದೆ. ಈ ಊರಿನ ಕೆರೆಗೆ ಬರುವ ಹಳ್ಳವನ್ನು ತಡೆದು ಅಡ್ಡಗಟ್ಟೆ ಹಾಕಿದ ಕಾರಣ ತರಿ ಬೆಳೆಗೆ ಅವಕಾಶವಿಲ್ಲದಂತೆ ಆಗಿರುತ್ತೆ. ಮಾದಿಹಳ್ಳಿ ಎ. ಕೆ. ಕಾಲೋನಿಯು ಅಶುಚಿಯಿಂದ ಕೂಡಿದೆ. ಇಲ್ಲಿ ಮಲೇರಿಯದ ಹಾವಳಿ ಜಾಸ್ತಿಯಾಗಿರುತ್ತೆ. ಹಳೇಬೀಡು ಹೋಬಳಿ ಹುಲಿಕೆರೆಯ ಪಾಠ ಶಾಲೆ ಶಿಥಿಲವಾಗಿದೆ. ಈ ಗ್ರಾಮವೂ ಅಶುಚಿಯಾಗಿದೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯವರು ಏನೂ ಕೆಲಸ ಮಾಡಿಲ್ಲ. ಇದೆಲ್ಲಾ ಪರಿಶೀಲನೆಯಿಂದ ಗೊತ್ತಾಗುತ್ತೆ. ಸೋರನಾಯಕನಹಳ್ಳಿಯಲ್ಲಿ ಎ. ಇ. ಎಸ್.ನವರೆ ವ್ಯಾಜ್ಯವನ್ನು ಹತ್ತಿಸಿ ಗ್ರಾಮದಲ್ಲಿ ಪಾರ್ಟಿ ತಂದಿರುತ್ತಾರೆ. ಹಳೆ ಬೀಡು ಪೋಲೀಸು ದಫೇದಾರರ ದೌರ್ಜನ್ಯ ಮಿತಿಮೀರಿದೆ. ಮೋದಿಹಳ್ಳಿ ಹೋಬಳಿ ತಿರುಮಲನಹಳ್ಳಿ ಬೇಸಿಕ್ ಪಾಠ ಶಾಲೆ ಚೆನ್ನಾಗಿದೆ. ಎ. ಇ. ಎಸ್.ನವರು ಇಲ್ಲಿ ಏನು ಕೆಲಸ ಮಾಡಿಲ್ಲ. ಅರಸಿಕೆರೆ ತಾಲ್ಲೂಕು ಬಾಣಾವರ ರೇಂಜ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಕೆಲವರು ಫೂಟ್‌ಲಾಯರ ಮಧ್ಯಸ್ಥಿನಿಂದ ಕೊಂಡ ಬಾಗಿಲು, ಬೆಂಡೆಕೆರೆ ಗ್ರಾಮದಲ್ಲಿ ಹಿಂದುಳಿದವರಿಗೆ ತೊಂದರೆ ಕೊಡುತ್ತಾ ಇರುತ್ತಾರೆ. ಇದನ್ನು ಸರ್ಕಾರದವರು ಪರಿಶೀಲಿಸಬೇಕು.

'ಓರ್ವ ನಾಗರಿಕ'
ಬೇಲೂರು

ರಾಜ್ಯದ ರಾಜಕೀಯರಂಗ

ಸ್ಥಳೀಯ ಚುನಾವಣೆಗಳಲ್ಲಿ ಮಂತ್ರಿಗಳ — ಕಿತಾಪತಿ !

ಮಂತ್ರಿಗಳು ಪ್ರವಾಸ ಹೋದಾಗ ಸ್ಥಳೀಯ ರಾಜಕೀಯದಲ್ಲಿ ಕಿತಾಪತಿ ಮಾಡುವುದು ಹೆಚ್ಚಾಗುತ್ತಿದೆ. ಇತ್ತೀಚೆಗೆ ಮಧುಗಿರಿ ತಾಲ್ಲೂಕಿಗೆ ಭೇಟಿ ಇತ್ತಿದ್ದ ಸಚಿವ ಮಾಲಿಮರಿಯಪ್ಪನವರು ಅಲ್ಲಿನ ಮುನಿಸಿಪಲ್ ಚುನಾವಣೆಗಳಲ್ಲಿ ಕೈ ಹಾಕಿ ತಮ್ಮ ಕೈಗೊಂಬೆ ಒಬ್ಬರು ಅಧ್ಯಕ್ಷರಾಗಿ ಆಯ್ಕೆಯಾಗುವಂತೆ ಮಾಡಿದ್ದಾರೆ.

ಈ ಮಧ್ಯೆ ಮುಂದೆ ಬರಲಿರುವ ಎಂ. ಪಿ.ಸಿ.ಸಿ. ಅಧ್ಯಕ್ಷರ ಚುನಾವಣೆಯಲ್ಲಿ ಮಂತ್ರಿಮಂಡಲಕ್ಕೆ ಅನುಕೂಲವಾಗಿರತಕ್ಕವರಿಗೆ ಜಯಲಭಿಸುವಂತೆ ಮಾಡಲು ಪ್ರಯತ್ನ ನಡೆಯುತ್ತಿದೆ. ಮಂತ್ರಿಗಳ ಪ್ರವಾಸ ಕಾಲದಲ್ಲಿ ಇದು ಬಹು ಮುಖ್ಯವಾದ ಕಾರ್ಯವಾಗಿದೆಯೆಂದು ತಿಳಿದು ಬಂದಿದೆ.

ಈ ಮಧ್ಯೆ ಮಂತ್ರಿಮಂಡಲದ ವಿರೋಧಿಗಳು ತಮ್ಮ ಗುಂಪನ್ನು ಬಲಗೊಳಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಕೋಲಾರ ಜಿಲ್ಲೆಯ ಎನ್. ಸಿ. ನಾಗಯ್ಯ ರೆಡ್ಡಿಯವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಯೋಚಿಸುತ್ತಿರುವುದಾಗಿಯೂ, ಅದಕ್ಕಾಗಿ ಬೆಂಬಲಗಳಿಸುತ್ತಿರುವುದಾಗಿಯೂ ತಿಳಿದು ಬಂದಿದೆ. ಈವರೆಗೆ ಆಗಲೇ ನಡೆಯಬೇಕಾಗಿದ್ದ ಅಧ್ಯಕ್ಷ ಚುನಾವಣೆಯು ಈ ತಿಂಗಳ ಅಂತ್ಯದಲ್ಲಿ ನಡೆಯುವ ನಿರೀಕ್ಷೆಯಿದೆ. ಮುಂದೆ ಹೋಗಬಹುದಾದ ಸಂಭವವೂ ಸಹ ಇದೆ.

ಕೋಲಾರ ಕಾಂಗ್ರೆಸ್ ಅವಸ್ಥೆ

ಮಂತ್ರಿಮಂಡಲದಲ್ಲಿ ಲಿಂಗಾರೆಡ್ಡಿಯವರನ್ನು ಸೇರಿಸಿಕೊಂಡುದಕ್ಕೆ ಕೋಲಾರ ಜಿಲ್ಲಾ ಕಾಂಗ್ರೆಸ್ ನಾಯಕರಲ್ಲಿ ಹಲವರಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ. ನಾರಾಯಣ ಗೌಡ ಇವರು ತಾವು ೬೦ ದಿನಿಂದ ಮಂತ್ರಿ ಮಂಡಲಕ್ಕೆ ಸೇರಲು ಯತ್ನಿಸಿ ವಿಫಲರಾದರು. ತಮ್ಮ ಯತ್ನದಲ್ಲಿ ಬೇಸತ್ತ ಶ್ರೀಯುತರು ಅಧ್ಯಕ್ಷ ಪದವಿಗೆ ರಾಜಿನಾಮೆ ಸಲ್ಲಿಸಿದರು. ಆದರೆ ಸಾಹುಕಾರ ಚನ್ನಯ್ಯನವರು ಸಮಯೋಚಿತವಾದ 'ಬುದ್ಧಿವಾದ' ಹೇಳಿ ಅವರು ರಾಜೀನಾಮೆ ಹಿಂತೆಗೆದುಕೊಳ್ಳುವಂತೆ ಮಾಡಿ ಕೃತಾರ್ಥರಾಗಿದ್ದಾರೆ. ಈಗ ಅಧ್ಯಕ್ಷಸ್ಥಾನದಲ್ಲಿ ಮುಂದುವರಿದು ತಮ್ಮ ಅಭೀಷ್ಟ ನೆರವೇರಿಸಿಕೊಳ್ಳಲು ಯತ್ನಿಸುತ್ತಿದ್ದಾರೆ.

ಸಾರಿಗೆ ವ್ಯವಸ್ಥೆ ಬಗ್ಗೆ ಜತ್ತಿ

ಮುಖ್ಯಮಂತ್ರಿ ಜತ್ತಿಯವರು ತಮ್ಮ ವಾರದ ಪತ್ರಿಕಾ ಸಮಾವೇಶದಲ್ಲಿ ಕಳೆದ ವಾರ ರಾಜ್ಯದ ಸಾರಿಗೆ ವ್ಯವಸ್ಥೆಯನ್ನು ಕುರಿತು ಮಾತನಾಡಿದ್ದಾರೆ. ಸರಕಾರವು ರೋಡ್ ಟ್ರಾನ್ಸ್ ಪೋರ್ಟ್ ಇಲಾಖೆಯನ್ನು ವಿಸ್ತರಿಸಿ, ಸಂಪೂರ್ಣವಾಗಿ ಸಾರಿಗೆ ವ್ಯವಸ್ಥೆಯನ್ನು ರಾಷ್ಟ್ರೀಕರಣಮಾಡಲು ಯೋಚಿಸಿದೆಯೆಂದು ತಿಳಿಸಿದ್ದಾರೆ.

ಬೆಂಗಳೂರು ನಗರದ ಬಿ. ಟಿ. ಎಸ್ ಬಗ್ಗೆ ಅವರು ಪ್ರಸ್ತಾಪವೆತ್ತಿ, ಹಲವು ಅಂಕಿ ಅಂಶಗಳನ್ನು ಇಟ್ಟಾಗ ಪತ್ರಿಕಾ ಪ್ರತಿನಿಧಿಗಳು, ಮುಖ್ಯ ಮಂತ್ರಿಗಳಿಗೆ ಅನೇಕ ಪ್ರಶ್ನೆಗಳನ್ನು ಹಾಕಿದರು. ಬಿ.ಟಿ. ಎಸ್. ಇಂದು ಅಸಮರ್ಪಕವಾಗಿ ಕೆಲಸ ಮಾಡುತ್ತಿರುವುದನ್ನು, ಬಸ್ಸುಗಳು ಸಕಾಲಕ್ಕೆ ಓಡದಿರುವುದನ್ನು, ಟಿಕೇಟುಗಳನ್ನು ಕೊಡಲು ಬಸ್ಸು ನಿಲ್ಲುವುದರಿಂದ ಅನವಶ್ಯಕವಾಗಿ ಸಮಯ ವ್ಯರ್ಥವಾಗುತ್ತಿರುವುದನ್ನು, ಪ್ರಯಾಣಿಕರಿಗೆ ಸರಿಯಾಗಿ ನಿಲ್ಲಲು ಬಸ್ ಷಲ್ಟರ್‌ಗಳು ಇಲ್ಲದಿರುವುದನ್ನು ಸಚಿವರ ಗಮನಕ್ಕೆ ತರಲಾಯಿತು. ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.

ಮುಖ್ಯ ಮಂತ್ರಿಗಳು ಪತ್ರಿಕಾ ಸಮ್ಮೇಳನದಲ್ಲಿ ಈ ಬಗ್ಗೆ ಸ್ಪಷ್ಟವಾದ ಉತ್ತರಗಳನ್ನು ಕೊಡಲಿಲ್ಲ ಸಮಸ್ಯೆಯ ಅರಿವು ಅವರಿಗಿಲ್ಲದಿದ್ದುದೇ ಅಥವಾ ಅರಿತ್ತಿದ್ದರೂ ಹೇಳಲಿಕ್ಕೆ ಬಾರದಿರುವುದೇ ಅದಕ್ಕೆ ಕಾರಣ. ಎಂದೂ ಹೇಳಬಹುದು.

ಭೂಸುಧಾರಣೆಯ ಕಾಯಿದೆ ಬಗ್ಗೆ ಒಂದು ಪ್ರಶ್ನೆಗೆ ಉತ್ತರವೀಯುತ್ತ ಮಸೂದೆ ಯಾವಾಗ ಸಿದ್ಧವಾಗುವುದೆಂಬುದರ ಬಗ್ಗೆ ಸ್ಪಷ್ಟವಾಗಿ ಸಚಿವರು ಹೇಳಲಿಲ್ಲ, ಶೀಘ್ರವಾಗಿ ತರಲಾಗುವುದು ಎಂದಷ್ಟೇ ಹೇಳಿದರು. ಪ್ರದೇಶ ಕಾಂಗ್ರೆಸ್ ಸಮಿತಿಯ ಅಭಿಪ್ರಾಯವನ್ನು ಸಲಹೆಗಳನ್ನು ತಾವು ನಿರೀಕ್ಷಿಸುತ್ತಿರುವುದಾಗಿ ತಿಳಿಸಿದ್ದಾರೆ. ವಿರೋಧ ಪಕ್ಷಗಳೊಂದಿಗೆ ಸಮಾಲೋಚನೆ ಮಾಡುವಿರಾ ಎಂಬ ಪ್ರಶ್ನೆಗೆ ಉತ್ತರವೀಯುತ್ತ, ವಿರೋಧ ಪಕ್ಷಗಳು ಅಭಿಪ್ರಾಯವನ್ನು ತಾವಾಗಿ ಕೊಟ್ಟಲ್ಲಿ ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಭೂಸುಧಾರಣೆಯಂಥ ಪ್ರಮುಖ್ಯವಾದ ಪ್ರಶ್ನೆಯ ಬಗ್ಗೆ ಎಲ್ಲ ಪಕ್ಷಗಳ ಅಭಿಪ್ರಾಯವನ್ನು ಪಡೆಯುವ ಬಗ್ಗೆ ಜತ್ತಿಯವರ ಧೋರಣೆ ವಿಚಿತ್ರವಾದುದಾಗಿದೆ.

ಉಪಗ್ರಹವನ್ನು ಭೂಮಿಗೆ ವಾಪಸು ತರುವದೆಂತು ?

(೫ನೇ ಪುಟದಿಂದ)

೨೦ ನಿಮಿಷಗಳೊಳಗಾಗಿ ಭೂಮಿಗೆ ವಾಪಸು

ಗತಿಯನ್ನು ಮಂದಗೊಳಿಸುವ ಆಕಾಶ ಬಾಣವು ಕೆಲಸವನ್ನು ನಿಲ್ಲಿಸಿದ ತರುವಾಯ 'ಹೀಲಿಯಂ' ಅನಿಲವನ್ನೊಳಗೊಂಡಿರುವ ಡಬ್ಬಿಯ ಕವಾಟವು (ವಾಲ್ವ್) ಆಕಾಶ ಬಾಣವನ್ನು ಹಾರಿಸಲಾದ ಸ್ಥಳದಲ್ಲಿ ತೆರೆದುಕೊಳ್ಳುತ್ತದೆ; ಮಡಿಸಲಾಗಿರುವ ಆಕಾಶ ಬುಟ್ಟಿಯಲ್ಲಿ ಅನಿಲವು ತುಂಬಿಕೊಳ್ಳುತ್ತದೆ, ಗತಿನಿರೋಧಕ ಆಕಾಶ ಬಾಣದಿಂದ ಬೇರೆಯಾಗಿ, ಛಾಯಾ ಚಿತ್ರಪಟಲವುಳ್ಳ ತೋಟಾವನ್ನು ಮಾತ್ರವೇ ತನ್ನೊಂದಿಗೆ ಕೆಳಕ್ಕೆ ತರುತ್ತದೆ. ಈ ಆಕಾಶ ಬುಟ್ಟಿಯು ಕೆಳಗೆ ಭೂಮಿಯ ಮೇಲೆ ಬೀಳುವ ಸ್ಥಳವನ್ನು ನಿರ್ದಿಷ್ಟವಾಗಿ ತಿಳಿಸುತ್ತಾ, ಆದರ ಶೋಧನೆಯನ್ನು ಸುಗಮಗೊಳಿಸುವಂತೆ, ಆಕಾಶ ಬುಟ್ಟಿಯು ಕೆಳಗೆ ಬೀಳುತ್ತಿರುವಾಗ ಪುಟ್ಟ ಬಾನುಲಿ ಪ್ರೇಷಕ ಯಂತ್ರವು ಸಂಕೇತಗಳನ್ನು ಹೊರಡಿಸುತ್ತದೆ.

ವಿಜ್ಞಾನಿಗಳು ಮಾಡಿರುವ ಲೆಕ್ಕಾಚಾರದ ಪ್ರಕಾರ, ೯೧೪ ಮಿಲ್ಲಿಮೀಟರ್ ವ್ಯಾಸವುಳ್ಳ ಈ ಆಕಾಶ ಬುಟ್ಟಿಯು, ೨೨೭ ಗ್ರಾಮುಗಳ ಒಟ್ಟು ತೂಕವುಳ್ಳ ಪಟಲಭರಿತ ತೋಟಾವನ್ನು ಭೂಮಿಗೆ ತರಬಲ್ಲುದು. ಈ ಆಕಾಶ ಬುಟ್ಟಿಯು ಗ್ರಹಪಥವನ್ನು ಬಿಟ್ಟುಬಂದ ಮೇಲೆ ೨೦ ನಿಮಿಷಗಳ ಹೊತ್ತಿನಲ್ಲಿ ಸೆಕೆಂಡಿಗೆ ೯ ಮೈಲಿಯ ಅಂತಿಮ ವೇಗದಿಂದ ಗಾಳಿಕೊಡೆಯಂತೆ (ಪ್ಯಾರಾಚೂಟ್) ಭೂಮಿಯ ಮೇಲೆ ಬೀಳುವುದು.

—(ಮುಗಿಯಿತು)—

ಅರಬ್ ರಾಷ್ಟ್ರವನ್ನು ತುಳಿಯದಿರಿ

(ಮೊದಲನೇ ಪುಟದಿಂದ)

ಅಮೇರಿಕಾ, ಬ್ರಿಟನ್ ಮತ್ತು ಫ್ರಾನ್ಸ್, ಭದ್ರತಾ ಮಂಡಲಿಯನ್ನೇ ಶೃಂಗ ಸಭೆಯಾಗಿ ನಡೆಸುವುದಕ್ಕೆ ತಾವು ಒಪ್ಪುವುದಾಗಿಯೂ, ಯು.ರಾ. ಸಂಸ್ಥೆಯಿಂದ ಹೊರಗಡೆ ಶೃಂಗಸಭೆ ಜರಗಬೇಕಾದುದಿಲ್ಲವೆಂದೂ ಹೇಳಿವೆ. ರಷ್ಯದ ಸೂಚನೆಗೂ ಪಶ್ಚಿಮ ರಾಷ್ಟ್ರಗಳ ಈ ಸೂಚನೆಗೂ ತುಂಬ ವ್ಯತ್ಯಾಸವಿದೆ. ತಮಗೆ ಭದ್ರತಾ ಮಂಡಲದಲ್ಲಿ ಯಾಂತ್ರಿಕ ಬಹುಮತವಿರುವುದರಿಂದ ಅಲ್ಲಿ ತಮಗೆ ಏನು ಬೇಕಾದರೂ ತೀರ್ಮಾನ ಮಾಡಬಹುದು; ಆದ ತೀರ್ಮಾನವನ್ನು ರಷ್ಯ ನಿಷೇಧಿಸಿದರೆ ದೂರು ಅದರ ಮೇಲೆ ಹೊರಿಸಬಹುದು ಎಂದು ಪಶ್ಚಿಮ ರಾಷ್ಟ್ರಗಳ ಹಂಚಿಕೆಯಾಗಿದೆ.

ಶೃಂಗ ಸಭೆಯು ಯು. ರಾ. ಸಂಸ್ಥೆಯ ಹೊರಗೆ, ಕೊನೆಯ ಯತ್ನವಾಗಿ, ನಡೆಯಬೇಕೆಂದೂ ಡಿಗಾಲ್ ಹೇಳಿರುವುದಾಗಿ ವರದಿಯಾಗಿದೆ.

ಕೊನೆಗೆ ಸಿಕ್ಕಿರುವ ವರದಿಯಂತೆ, ಕ್ರುಶ್ಚೇವ್‌ರವರು ಯು. ರಾ. ಸಂಸ್ಥೆಯೊಳಗಣ ಶೃಂಗ ಸಭೆಯಲ್ಲಿ ಭಾಗವಹಿಸಲು ತಾವು ತಯಾರಿರುವುದಾಗಿಯೂ ಅಂಥ ಸಭೆಗೆ ಭಾರತದ ಮತ್ತು ಅರಬ್ ರಾಷ್ಟ್ರಗಳ ಪ್ರತಿನಿಧಿಗಳನ್ನೂ ಆಹ್ವಾನಿಸಬೇಕೆಂದೂ ಕೇಳಿದ್ದಾರೆ.

ಅಂತೂ, ಮಧ್ಯಪೂರ್ವ ಪ್ರದೇಶದಿಂದ ಸಾಮ್ರಾಜ್ಯಶಾಹೀ ಆಕ್ರಮಣಗಾರರು ತೊಲಗಬೇಕು. ಅದಕ್ಕೋಸ್ಕರ ಉಚ್ಚಮಟ್ಟದ ಸಭೆ ಜರುಗಬೇಕು.

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone: 3810